23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 308 | ನವದೆಹಲಿ | ಬೆಲೆ ₹10 | ಮೇ 14 2026, ಗುರುವಾರ



# ಸವಾಲುಗಳನ್ನು ಲೀಲಾಜಾಲವಾಗಿ ಪರಿಹರಿಸುವ ಹಿರಿಯ ಐಎಎಸ್ ಅಧಿಕಾರಿ

# ಡಿ.ರಂದೀಪ್

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸರ್ಕಾರದ ಕಾರ್ಯದರ್ಶಿ ಜಂಟಿ ಕಾರ್ಯದರ್ಶಿ, ಬೆಂಗಳೂರು ಮಹಾನಗರ ಪಾಲಿಕೆ ವಿಶೇಷ ಆಯುಕ್ತರು, ಉಪಕಾರ್ಯದರ್ಶಿ ಮಹಾನಗರ ಪಾಲಿಕೆ, ನಗರಾಭಿವೃದ್ಧಿ, ಪುರಸಭೆ ಆಡಳಿತ, ವಿಜಯಪುರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲಾಧಿಕಾರಿ, ಭೂ ಕಂದಾಯ ನಿರ್ವಹಣೆ ಮತ್ತು ಜಿಲ್ಲಾ ಆಡಳಿತ, ಆರೋಗ್ಯ-ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರಾಗಿ, ಹಣಕಾಸು ಇಲಾಖೆ ಬಜೆಟ್ ಮತ್ತು ಸಂಪನ್ಮೂಲ ಉಪಕಾರ್ಯದರ್ಶಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ.**


**ಹಿರಿಯ ಐಎಎಸ್ ಅಧಿಕಾರಿ ಡಿ. ರಂದೀಪ್ ಅವರು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. ಅವರ ತಂದೆ ಐ.ದೇವೇಂದ್ರನ್ ಅವರೂ ಕೂಡ ಕರ್ನಾಟಕ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿಯಾಗಿ ರಾಜ್ಯದಲ್ಲಿ ಉತ್ತಮ ಆಡಳಿತಗಾರರು ಎಂದು ಹೆಸರು ಮಾಡಿದ್ದರು. ಅವರ ಮಾರ್ಗದರ್ಶನದಲ್ಲೇ ಬೆಳೆದ ಡಿ.ರಂದೀಪ್ ಅವರು ಶಿಕ್ಷಣ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಇ ಪದವಿ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದಿಂದ ಎಂಎ ಪದವಿ ಪಡೆದವರು.**

■ ಕರ್ನಾಟಕ ಕೇಡರ್‌ನ 2006ನೇ ಬ್ಯಾಚ್‌ನ ಹಿರಿಯ ಐಎಎಸ್ ಅಧಿಕಾರಿ ಡಿ. ರಂದೀಪ್ ಅವರಿಗೆ ಈಗ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕಾರ್ಯದರ್ಶಿ ಮತ್ತು ಸಮಾಜಕಲ್ಯಾಣ ಇಲಾಖೆಯ ಹೆಚ್ಚುವರಿ ಜವಾಬ್ದಾರಿಯನ್ನು ವಹಿಸಲಾಗಿದೆ. ಸಾಮಾನ್ಯವಾಗಿ ಸವಾಲಿನ ಕೆಲಸಗಳನ್ನು ಲೀಲಾಜಾಲವಾಗಿ ನಿರ್ವಹಿಸುವ ರಂದೀಪ್ ಅವರ ಕಾರ್ಯಕ್ಷಮತೆಯನ್ನು ನೋಡಿಯೇ ಗ್ರಾಮೀಣ ಅಭಿವೃದ್ಧಿ (ಪಂಚಾಯತ್ ಇಲಾಖೆ) ಇಲಾಖೆಯನ್ನು ಇವರ ಸುಪರ್ದಿಗೆ ವಹಿಸಲಾಗಿದೆ.

■ 2005ರಲ್ಲಿ ಯುಪಿಎಸ್‌ಸಿ ತೇರ್ಗಡೆಯ ನಂತರ ಅವರು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕವನ್ನು. ಚಿಕ್ಕವರಿದ್ದಾಗಿನಿಂದ ಕರ್ನಾಟಕದ ವಿವಿಧ ಭಾಗಗಗಳನ್ನು ನೋಡುತ್ತಲೇ ಬೆಳೆದಿರುವ ಡಿ.ರಂದೀಪ್ ಅವರು, ಹಾಸನ ಮತ್ತು ಮೈಸೂರು ಜಿಲ್ಲಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸಿ ಒಳ್ಳೆಯ ಹೆಸರು ಮಾಡಿದವರು. ವಿಶೇಷವಾಗಿ ಮೈಸೂರು ದಸರಾ ಉತ್ಸವವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವ ಮೂಲಕ ಸರ್ಕಾರ ಮತ್ತು ಸಾರ್ವಜನಿಕರಿಂದ ಮೆಚ್ಚುಗೆ ಗಳಿಸಿದವರು.

■ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರು, ಬಿಬಿಎಂಪಿ ವಿಶೇಷ ಆಯುಕ್ತರು (ಆಡಳಿತ ಮತ್ತು ಘನತ್ಯಾಜ್ಯ ನಿರ್ವಹಣೆ), ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

■ ಡಿ.ರಂದೀಪ್ ಅವರು ಕರ್ನಾಟಕದಲ್ಲಿ ಆರೋಗ್ಯ ಸೇವೆಗಳ ಡಿಜಿಟಲೀಕರಣ ಮತ್ತು ಘನತ್ಯಾಜ್ಯ ನಿರ್ವಹಣಾ ಸುಧಾರಣೆಗಳಲ್ಲಿ ಪ್ರಮುಖ ಪಾತ್ರ ವಹಿಸುವ ಮೂಲಕ ರಾಷ್ಟ್ರದ ಗಮನ ಸೆಳೆದಿದ್ದಾರೆ. ಸುಮಾರು 20 ವರ್ಷಗಳ ಅವರ ಸೇವೆಯಲ್ಲಿ ಆಡಳಿತಾತ್ಮಕ ಬದಲಾವಣೆಗಳಿಗೆ ಹೆಚ್ಚಿನ ಒತ್ತು ನೀಡುವ ಅಧಿಕಾರಿ ಎಂದು ಗುರುತಿಸಿಕೊಂಡಿದ್ದಾರೆ.



ಡಿ.ರಂದೀಪ್ ಅವರ ತಾಯಿ-ತಂದೆ ಡಾ.ಯಮುನಾ ಐ ದೇವೇಂದ್ರನ್ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಡಾ.ಐ ದೇವೇಂದ್ರನ್

■ ಡಿ.ರಂದೀಪ್ ಅವರು ತಮ್ಮ ವೃತ್ತಿ ಜೀವನದುದ್ದಕ್ಕೂ ಆಯುಕ್ತರು, ಸರ್ಕಾರದ ಕಾರ್ಯದರ್ಶಿ, ಹೆಚ್ಚುವರಿ ಆಯುಕ್ತರು, ಉಪ ಆಯುಕ್ತರು, ಉಪ ಕಾರ್ಯದರ್ಶಿ ಮತ್ತು ಸಹಾಯಕ ಆಯುಕ್ತರು ಸೇರಿದಂತೆ ವಿವಿಧ ಉನ್ನತ ಹುದ್ದೆಗಳನ್ನೇ ನಿರ್ವಹಿಸಿಕೊಂಡು ಬಂದಿದ್ದಾರೆ. ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ತಮಿಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಅವರು, ಆಡಳಿತಕ್ಕೆ ಭಾಷೆ ಮುಖ್ಯವಲ್ಲ. ಜನರೊಂದಿಗೆ ಸಂವಹನ ಮುಖ್ಯ ಎನ್ನುವ ಡಿ ರಂದೀಪ್ ಅವರಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅತ್ಯಂತ ಅಚ್ಚುಮೆಚ್ಚು. ಯಾಕೆಂದರೆ 'ನಾನು ಹುಟ್ಟಿ ಬೆಳೆದಿರುವುದು ಇದೇ ನೆಲದಲ್ಲಿ ಅಲ್ಲವೇ' ಎನ್ನುತ್ತಾರೆ ಮುಗುಳುನಗುತ್ತ.

■ ಆರೋಗ್ಯ ಇಲಾಖೆ ಆಯುಕ್ತರಾಗಿರುವಾಗ ರಾಜ್ಯಕ್ಕೆ ಕೋವಿಡ್ ಆವರಿಸಿಕೊಂಡಿತ್ತು. ಇಡೀ ರಾಜ್ಯದ ಜನರಿಗೆ ಮೂರು ಸುತ್ತಿನ ಕೋವಿಡ್ ಲಸಿಕೆ ಹಾಕಿಸುವುದು ಮತ್ತು ಕೋವಿಡ್ ರೋಗಿಗಳಿಗೆ ಅಗತ್ಯ ಔಷಧಿಗಳನ್ನು ಮತ್ತು ಆರೈಕೆ ನೀಡುವ ಮುಂತಾದವುಗಳೂ ಸೇರಿದಂತೆ ಪರಿಸ್ಥಿತಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸುವ ಮೂಲಕ ಸರ್ಕಾರದಿಂದ ಮೆಚ್ಚುಗೆ ಪಡೆದಿದ್ದ ಡಿ.ರಂದೀಪ್ ಅವರು, ಯಾವುದೇ ಕೆಲಸವನ್ನು ಅತ್ಯಂತ ಹೊಣೆಗಾರಿಕೆಯಿಂದ, ತ್ವರಿತಗತಿಯಿಂದ ನಿಭಾಯಿಸುವ ಚಾಣಾಕ್ಷ ಅಧಿಕಾರಿ ಎಂದು ಹೆಸರು ಮಾಡಿದವರು.

■ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಗೆ ವಿಶೇಷ ಆಯುಕ್ತರಾಗಿದ್ದಾಗ ಅವರ ವರ್ಗಾವಣೆಯು ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವನ್ನು ಹುಟ್ಟುಹಾಕಿತ್ತು. ಎರಡು ವರ್ಷಗಳ ನಂತರ ಮತ್ತೊಮ್ಮೆ ಹಠಾತ್ ವರ್ಗಾವಣೆ ನಡೆದಿದೆ.

■ ಘನತ್ಯಾಜ್ಯ ನಿರ್ವಹಣೆಯ ಕುರಿತು ಬಿಬಿಎಂಪಿಯೊಂದಿಗೆ ಕೆಲಸ ಮಾಡುತ್ತಿರುವ ನಾಗರಿಕ ಕಾರ್ಯಕರ್ತರ ಪ್ರಕಾರ, ತ್ಯಾಜ್ಯ ನಿರ್ವಹಣೆ ಮತ್ತು ಪಶುಸಂಗೋಪನಾ ಇಲಾಖೆಗಳಲ್ಲಿ ವಿವಿಧ ಸುಧಾರಣೆಗಳನ್ನು ತರುವಲ್ಲಿ ಡಿ.ರಂದೀಪ್ ಅವರು ಅತ್ಯಂತ ಮುಕ್ತರಾಗಿ ಕಾರ್ಯ ನಿರ್ವಹಿಸಿದ್ದರು. ಪ್ರಾಸಂಗಿಕವಾಗಿ, ತ್ಯಾಜ್ಯದಿಂದ ಇಂಧನ ಸ್ಥಾವರಗಳಿಗೆ (ಬಿಬಿಎಂಪಿ) ಮತ್ತು ಫ್ರೆಂಚ್ ಪುರಸಭೆಗಳ ತ್ಯಾಜ್ಯ ನಿರ್ವಹಣಾ ಪ್ರಕ್ರಿಯೆಗಳ ಕಾರ್ಯಸಾಧ್ಯತೆಯ ಅಧ್ಯಯನ ಕುರಿತು ಮಹತ್ವದ ಪಾತ್ರ ವಹಿಸಿದ್ದರು.

■ ಇದೀಗ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ (ಪಂಚಾಯತ್‌ರಾಜ್) ಕಾರ್ಯದರ್ಶಿಯಗಿ ಸೇವೆ ಸಲ್ಲಿಸಿದ್ದರು. ಸಮರ್ಥವಾಗಿ ನಿಭಾಯಿಸಬಲ್ಲರು ಎಂಬ ವಿಶ್ವಾಸದಿಂದಲೇ ಪಂಚಾಯತ್‌ರಾಜ್ ಇಲಾಖೆಯ ಹೊಣೆಗಾರಿಕೆಯನ್ನು ಡಿ.ರಂದೀಪ್ ಅವರಿಗೆ ವಹಿಸಲಾಗಿದೆ ಎನ್ನಲಾಗುತ್ತಿದೆ.

■ ಕೆಲಸ ಯಾವುದಾದರೇನು, ಜನರ ಸೇವೆ ಪ್ರಾಮಾಣಿಕತೆಯಿಂದ ಮಾಡಬೇಕು ಅಷ್ಟೇ. ಗ್ರಾಮೀಣ ಜನರಿಗೆ ಕುಡಿಯುವ ನೀರೂ ಸೇರಿದಂತೆ ಇತರ ಸೇವೆಗಳನ್ನು ಒದಗಿಸುವ ಭಾಗ್ಯ ನನಗೆ ಲಭಿಸಿದೆ ಎಂದು ಸಂತೋಷಪಡುತ್ತೇನೆ. ಸರ್ಕಾರದ ಮತ್ತು ಸಚಿವರ, ಶಾಸಕರ ಸಲಹೆ ಸೂಚನೆಗಳನ್ನು ಪಡೆದು, ಜನರ ಸಮಸ್ಯೆ ಪರಿಹರಿಸಲು ಶಕ್ತಿಮೀರಿ, ಪ್ರಾಮಾಣಿಕತೆಯಿಂದ ಪ್ರಯತ್ನಿಸಿ ಯಶಸ್ವಿಯಾಗುವ ಭರವಸೆ ತಮಗಿದೆ ಎಂದು ಡಿ.ರಂದೀಪ್ ಅವರು ಆತ್ಮವಿಶ್ವಾಸ ವ್ಯಕ್ತಪಡಿಸುತ್ತಾರೆ. ■■■

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಮೇ 14 2026, ಗುರುವಾರ

## ಒಳಪುಟಗಳಲ್ಲಿ

ಶ್ರೀಶೈಲದಲ್ಲಿ ತಿರುಪತಿ ಮಾದರಿ ವಸತಿಗೃಹ ನಿರ್ಮಾಣ - ಪು.4

ಶೇ.25ರಷ್ಟು ವೇತನ ಪರಿಷ್ಕರಣೆಗೆ ಪಟ್ಟು, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ - ಪು.5

ಸ್ಪೀಕರ್ ಮೇಲೆ ಹಲ್ಲೆಗೆ ಯತ್ನಿಸಿದ 11 ಮಂದಿ ವಿರುದ್ಧ ಎಫ್ಐಆರ್ - ಪು.6

# ಭೂ ಗ್ಯಾರಂಟಿ ಸರ್ಕಾರದ ಆರನೇ ಗ್ಯಾರಂಟಿ: ಡಿ.ಕೆ. ಶಿವಕುಮಾರ್

**ಬೆಂಗಳೂರು, ಮೇ 13: ರಾಜಧಾನಿಯ ಆಸ್ತಿ ಮಾಲೀಕರಿಗೆ ರಾಜ್ಯ ಸರ್ಕಾರ ಸಿಹಿಸುದ್ದಿ ನೀಡಿದೆ. ನಮ್ಮ ಖಾತೆ ನಮ್ಮ ಹಕ್ಕು ಅಭಿಯಾನದ ಮೂಲಕ ಆಸ್ತಿ ದಾಖಲೆಗಳನ್ನು ನೇರವಾಗಿ ಮನೆ ಬಾಗಿಲಿಗೆ ತಲುಪಿಸುವ ಬೃಹತ್ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ.**

ಹಿಂದೆ ಇದ್ದ 5% ಮಾರ್ಗಸೂಚಿ ಮೌಲ್ಯದ ಶುಲ್ಕವನ್ನು ಈಗ ಕೇವಲ 2%ಕ್ಕೆ ಇಳಿಸಲಾಗಿದೆ. (ಉದಾಹರಣೆಗೆ: 5 ಲಕ್ಷ ರೂ. ಕಟ್ಟಬೇಕಿದ್ದ ಜಾಗದಲ್ಲಿ ಈಗ 2 ಲಕ್ಷ ರೂ. ಪಾವತಿಸಿದರೆ ಸಾಕು). ಈ ರಿಯಾಯಿತಿಯು ಕೇವಲ 100 ದಿನಗಳವರೆಗೆ ಲಭ್ಯವಿರುತ್ತದೆ. ಈ ಅವಧಿಯ ನಂತರ ಶುಲ್ಕವು ಪುನಃ 5%ಕ್ಕೆ ಏರಿಕೆಯಾಗಲಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಜೂನ್ 15ರಿಂದ ಆರಂಭವಾಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕೇಂದ್ರ ಕಚೇರಿಯ ಸಮ್ಮೇಳನ ಸಭಾಂಗಣದಲ್ಲಿ ಸರ್ಕಾರದ 6ನೇ ಗ್ಯಾರಂಟಿ – ಭೂ ಗ್ಯಾರಂಟಿ ಹಾಗೂ ಬೆಂಗಳೂರಿಗೆ ಸಂಬಂಧಿಸಿದ ಹಲವಾರು ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಡಿಕೆಶಿ, ಬೆಂಗಳೂರು ನಗರದ ಇತಿಹಾಸದಲ್ಲಿ ಈವರೆಗೆ ಯಾರೂ ಇಂತಹ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ನಮ್ಮ ಬೆಂಗಳೂರಿನ 23 ಲಕ್ಷ ಮನೆಗಳ ಆಸ್ತಿಗಳನ್ನು ಅಧಿಕೃತಗೊಳಿಸಿ, ಹಕ್ಕುಪತ್ರಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲು ತೀರ್ಮಾನಿಸಿದ್ದೇವೆ. ನಾವು ಆರನೇ ಗ್ಯಾರಂಟಿ ಅಂದರೆ ಭೂ ಗ್ಯಾರಂಟಿಯ ಯೋಜನೆಯ ಮೂಲಕ ಆಸ್ತಿ ದಾಖಲೆಗಳ ದುರುಪಯೋಗವನ್ನು ತಡೆಯಲು ಪ್ರತಿಯೊಂದು ಆಸ್ತಿಯ ಮ್ಯಾಪಿಂಗ್ ಮತ್ತು ವಿವಿಧ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಆಸ್ತಿ ದಾಖಲೆ ಒದಗಿಸುತ್ತೇವೆ ಎಂದರು.

**ಎ-ಖಾತೆ ಮಾಡಿಸಿಕೊಳ್ಳಲು ಮೇ 16ರಿಂದ ನಮ್ಮ ಖಾತೆ, ನಮ್ಮ ಹಕ್ಕು ಅಭಿಯಾನ**




**3 ತಿಂಗಳು ಅಭಿಯಾನ:** ಇದಕ್ಕಾಗಿ ನನ್ನ ಖಾತೆ – ನನ್ನ ಹಕ್ಕು ಅಭಿಯಾನ ಹಮ್ಮಿಕೊಳ್ಳಲಾಗುವುದು. ಪ್ರಸ್ತುತ ನಗರದಲ್ಲಿ 7 ಲಕ್ಷ ಬಿ–ಖಾತೆಗಳಿದ್ದು, ಈ ಪೈಕಿ ಆರಂಭದಲ್ಲಿ ಬಂದ 11 ಸಾವಿರ ಅರ್ಜಿಗಳಲ್ಲಿ 7 ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಈಗ ಅಭಿಯಾನದ ಮೂಲಕ ಎಲ್ಲಾ 7 ಲಕ್ಷ ಜನರಿಗೂ ಅನುಕೂಲ ಮಾಡಿಕೊಡುವುದು ಸರ್ಕಾರದ ಗುರಿಯಾಗಿದೆ. ಮೇ 16ರಿಂದ ಆರಂಭಿಸಿ ಮೂರು ತಿಂಗಳ ಕಾಲ ಪ್ರತಿ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಅಭಿಯಾನ ನಡೆಯಲಿದೆ. ಒಂದು ಪಾಲಿಕೆಗೆ ಹತ್ತು ಸ್ಥಳಗಳಂತೆ ಒಟ್ಟು 50 ಜಾಗಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಎರಡನೇ ಮತ್ತು ನಾಲ್ಕನೇ ಶನಿವಾರ ರಜೆ ಇದ್ದರೂ ಅಧಿಕಾರಿಗಳು ಲಭ್ಯವಿದ್ದು ಕೆಲಸ ಮಾಡಲಿದ್ದಾರೆ. ಯಾರೊಬ್ಬರಿಂದಲೂ ರೂಪಾಯಿ ಲಂಚವಿಲ್ಲದೆ ಪಾರದರ್ಶಕವಾಗಿ ಮನೆ ಬಾಗಿಲಿಗೆ ಖಾತೆ ಒದಗಿಸಿಕೊಡುವುದೇ ಸರ್ಕಾರದ ಸಂಕಲ್ಪವಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಈ ವೇಳೆ ಸಚಿವ ಕೆ.ಜೆ. ಜಾರ್ಜ್, ಬಿಡಿಎ ಅಧ್ಯಕ್ಷರು ಹಾಗೂ ಶಾಸಕ ಎನ್.ಎ. ಹ್ಯಾರಿಸ್, ಜಿಬಿಎ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಶಾಸಕ ಎ.ಸಿ.ಶ್ರೀನಿವಾಸ್ ಹಾಗೂ ಪರಿಷತ್ ಸದಸ್ಯ ಕೆ. ಗೋವಿಂದರಾಜ್ ಅವರು ಉಪಸ್ಥಿತರಿದ್ದರು.

ಬಿ–ಖಾತೆಯಿಂದ ಎ–ಖಾತೆಗೆ ಪರಿವರ್ತಿಸಿಕೊಳ್ಳುವವರಿಗೆ ದೊಡ್ಡ ರಿಯಾಯಿತಿಯನ್ನು ಘೋಷಿಸಲಾಗಿದೆ. ಸಾಮಾನ್ಯವಾಗಿ ಶೇ.5ರಷ್ಟು ಮಾರ್ಗಸೂಚಿ ಮೌಲ್ಯದ ಶುಲ್ಕವಿರುತ್ತದೆ. ಆದರೆ ನೂರು ದಿನದೊಳಗೆ ಅರ್ಜಿ ಸಲ್ಲಿಸುವವರಿಗೆ ಕೇವಲ ಶೇ.2ರಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ. ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳಬೇಕು.

–ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

### ಕೋರ್ಟ್ ನಿರ್ದೇಶನದಂತೆ ಜಿಬಿಎ ಚುನಾವಣೆ

ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಕೋರ್ಟ್ ನಿರ್ದೇಶನದ ಪ್ರಕಾರ ನಡೆಯುತ್ತದೆ ಚುನಾವಣೆ ಯಾವಾಗ ನಡೆಯಲಿದೆ ಎಂಬ ಪ್ರಶ್ನೆಗೆ ಈ ರೀತಿ ಪ್ರತಿಕ್ರಿಯಿಸಿದರು. ಈ ವರ್ಷ ಜಿಬಿಎ ಆದಾಯದ ನಿರೀಕ್ಷೆ ಏನಿದೆ ಎಂದು ಕೇಳಿದಾಗ, "ಆದಾಯ ಬರಲಿ ನೋಡೋಣ. ನಾವು ಆದಾಯದ ಲೆಕ್ಕಹಾಕುತ್ತಿಲ್ಲ.

ಬೆಲೆ ಏರಿಕೆಯಿಂದ ತತ್ತರಿಸಿರುವ ಜನರ ಬದುಕು ರಕ್ಷಣೆ ಮಾಡಬೇಕು. 'ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ, ವಿದೇಶ ಪ್ರಯಾಣ ಬೇಡ' ಎಂದು ಹೇಳುವ ಕಷ್ಟ ಕಾಲದಲ್ಲಿ ಜನರಿಗೆ ಒಳ್ಳೆಯದಾಗಬೇಕು" ಎಂದು ತಿಳಿಸಿದರು.


## ವಾರದೊಳಗೆ ನೀಟ್–ಯುಜಿ ಮರುಪರೀಕ್ಷೆ ದಿನಾಂಕ ಘೋಷಣೆ: ಎನ್‌ಟಿಎ

**ನವದೆಹಲಿ, ಮೇ 13:** ಪ್ರಶ್ನೆಪತ್ರಿಕೆ ಸೋರಿಕೆ ಕಾರಣ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ಮೇ 3ರಂದು ನಡೆದಿದ್ದ ನೀಟ್–ಯುಜಿ ಪರೀಕ್ಷೆಯನ್ನು ರದ್ದುಗೊಳಿಸಿರುವ ನ್ಯಾಷನಲ್ ಟೆಸ್ಟ್ ಏಜೆನ್ಸಿ (ಎನ್‌ಟಿಎ) ಇನ್ನೊಂದು ವಾರದೊಳಗೆ ನೀಟ್–ಯುಜಿ ಮರುಪರೀಕ್ಷೆಗೆ ದಿನಾಂಕ ಘೋಷಿಸುವುದಾಗಿ ಹೇಳಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್‌ಟಿಎ ಡೈರೆಕ್ಟರ್ ಜನರಲ್ ಅಭಿಷೇಕ್ ಸಿಂಗ್, ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ, ಪರೀಕ್ಷೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಲು ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಮತ್ತೊಂದೆಡೆ ನೀಟ್ ಮರು ಪರೀಕ್ಷೆ ಯಾವಾಗ ಎನ್ನುವ ಆತಂಕದಲ್ಲಿದ್ದ ವಿದ್ಯಾರ್ಥಿಗಳಿಗೆ ಇನ್ನು 7ರಿಂದ 10 ದಿನಗಳಲ್ಲಿ ನೀಟ್ ಪರೀಕ್ಷೆ ಪರಿಷ್ಕೃತ ವೇಳಾಪಟ್ಟಿ ಪ್ರಕಟವಾಗಲಿದೆ ಎಂದು ಹೇಳಿದ್ದಾರೆ.

**700 ವಿದ್ಯಾರ್ಥಿಗಳಿಗೆ ಪತ್ರಿಕೆ ಸೋರಿಕೆ:** ಡೆಹ್ರಾಡೂನ್‌ನಲ್ಲಿ ಬಂಧಿಸಲಾದ ಆರೋಪಿ ರಾಕೇಶ್ ಕುಮಾರ್ ಮಾಂಡ್ವಾರಿಯಾ ಬಗ್ಗೆಯೂ ಪ್ರಮುಖ ಬಹಿರಂಗಪಡಿಸುವಿಕೆಗಳು ಹೊರಬಂದಿವೆ. ರಾಕೇಶ್ ಸುಮಾರು 700 ವಿದ್ಯಾರ್ಥಿಗಳಿಗೆ ಪತ್ರಿಕೆಯನ್ನು ವಿತರಿಸಿದ್ದಾರೆ ಎಂದು ಏಜೆನ್ಸಿಗಳು ಹೇಳುತ್ತವೆ. ಮೊದಲು ಪ್ರಶ್ನೆ ಪತ್ರಿಕೆಯನ್ನು ಡಿಜಿಟಲ್ ರೂಪದಲ್ಲಿ ಕಳುಹಿಸಲಾಗಿದ್ದು, ನಂತರ ಮುದ್ರಿತ ಪ್ರತಿಗಳನ್ನು ಸಹ ತಯಾರಿಸಿ ಮಾರಾಟ ಮಾಡಲಾಗಿದೆ ಎಂದು ವರದಿಯಾಗಿದೆ. ಪ್ರಸ್ತುತ, ಪ್ರಶ್ನೆಪತ್ರಿಕೆಯನ್ನು ಪಡೆಯಲು ಹಣ ಪಾವತಿಸಿದ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಗುರುತಿಸಲು ತನಿಖಾ ಸಂಸ್ಥೆಗಳು ಕೆಲಸ ಮಾಡುತ್ತಿವೆ

## ಭವಾನಿಪುರ ಉಳಿಸಿಕೊಂಡು ನಂದಿಗ್ರಾಮಕ್ಕೆ ರಾಜೀನಾಮೆ

**ಕೋಲ್ಕತ್ತಾ, ಮೇ 13:** ಪ.ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು, ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಗೆದ್ದಿದ್ದ ಭವಾನಿಪುರ ಕ್ಷೇತ್ರವನ್ನು ಉಳಿಸಿಕೊಳ್ಳುವುದಾಗಿ ಬುಧವಾರ ಘೋಷಿಸಿದ್ದು, ನಂದಿಗ್ರಾಮಕ್ಕೆ ರಾಜೀನಾಮೆ ನೀಡಿದ್ದಾರೆ. ಇತ್ತೀಚಿಗೆ ನಡೆದ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಸುವೇಂದು ಅಧಿಕಾರಿ ಅವರು ಭವಾನಿಪುರದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಹಾಗೂ ತಮ್ಮ ಸ್ವಕ್ಷೇತ್ರ ನಂದಿಗ್ರಾಮದಲ್ಲಿ ಟಿಎಂಸಿ ಅಭ್ಯರ್ಥಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದರು. ಎರಡೂ ಕಡೆ ಗೆಲುವು ಸಾಧಿಸಿರುವ ಸುವೇಂದು ಅಧಿಕಾರಿ ಅವರು ಈಗ ಒಂದು ಕಡೆ ರಾಜೀನಾಮೆ ನೀಡಿದ್ದು, ಭವಾನಿಪುರವನ್ನು ಉಳಿಸಿಕೊಂಡಿದ್ದಾರೆ.



# ಇಂಧನ ಉಳಿತಾಯಕ್ಕೆ ಕ್ರಮ: ಪ್ರಧಾನಿ ಮೋದಿ ಬೆಂಗಾವಲು ವಾಹನಗಳ ಸಂಖ್ಯೆ ಶೇ.50 ಕಡಿತ

**ನವದೆಹಲಿ, ಮೇ 13:** ಪಶ್ಚಿಮ ಏಷ್ಯಾದ ಉದ್ವಿಗ್ನತೆ, ಇರಾನ್ ಮತ್ತು ಅಮೇರಿಕ ನಡುವಿನ ಸಂಘರ್ಷ ಹಾಗೂ ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ಬೆಲೆ ಏರಿಕೆಯ ಹಿನ್ನೆಲೆ ದೇಶದಲ್ಲಿ ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಮಹತ್ವದ ಕ್ರಮ ಕೈಗೊಂಡಿದ್ದಾರೆ. ವಿಶೇಷ ಭದ್ರತಾ ಪಡೆ ಬಳಸುವ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲು ಅವರು ಸೂಚನೆ ನೀಡಿದ್ದಾರೆ.

ಮಿತವ್ಯಯ ಕ್ರಮಗಳ ಭಾಗವಾಗಿ ಇತ್ತೀಚೆಗೆ ನಡೆದ ಗುವಾಹಟಿ ಹಾಗೂ ವಡೋದರಾ ಭೇಟಿಗಳಲ್ಲೂ ಕಡಿಮೆ ವಾಹನಗಳಲ್ಲಿಯೇ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಈ ಮೂಲಕ ಕೇವಲ ಸಾರ್ವಜನಿಕರಿಗೆ ಮಾತ್ರವಲ್ಲ, ಸರ್ಕಾರವೂ ಮಿತವ್ಯಯ ಕ್ರಮಗಳನ್ನು ಅನುಸರಿಸುತ್ತಿದೆ ಎಂಬ ಸಂದೇಶವನ್ನು ಪ್ರಧಾನಿ ನೀಡಿದ್ದಾರೆ.

ಇದಲ್ಲದೆ, ಪ್ರಧಾನಿ ಭದ್ರತೆಗಾಗಿ ಬಳಸುವ ಕೆಲವು ವಿಶೇಷ ಬೆಂಗಾವಲು ವಾಹನಗಳಲ್ಲಿ ಎಲೆಕ್ಟ್ರಿಕ್ ಕಾರುಗಳ ಬಳಕೆಗೆ ಸಹ ಅನುಮತಿ ನೀಡಲಾಗಿದೆ. ಇಂಧನ ಬಳಕೆಯನ್ನು ಕಡಿಮೆ ಮಾಡುವ ಜೊತೆಗೆ ಪರಿಸರ ಸ್ನೇಹಿ ಕ್ರಮಗಳಿಗೂ ಸರ್ಕಾರ ಒತ್ತು ನೀಡುತ್ತಿದೆ.



ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಿದ್ದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪ್ರಧಾನಮಂತ್ರಿ ಕಚೇರಿ ಪ್ರಧಾನಿ ಮೋದಿ ಭಾಷಣದ ಪ್ರತಿಗಳನ್ನು ಹಂಚಿಕೆ ಮಾಡಿದೆ. ಅದರಲ್ಲಿ ಪ್ರಸ್ತುತ ಜಾಗತಿಕ ಸಂಕಷ್ಟದ ಸಂದರ್ಭದಲ್ಲಿ ಅನುಸರಿಸಬೇಕಾದ ಮಿತವ್ಯಯ ಕ್ರಮಗಳು ಮತ್ತು ಕಾರ್ಯಯೋಜನೆಗಳ ಕುರಿತು ವಿವರಿಸಲಾಗಿತ್ತು ಎಂದು ತಿಳಿದುಬಂದಿದೆ.

ಕೇಂದ್ರ ಸರ್ಕಾರದ ಕಾರ್ಯಯೋಜನೆಯಲ್ಲಿ ನಾಗರಿಕರಿಗೆ ಎಲೆಕ್ಟ್ರಿಕ್ ವಾಹನಗಳ ಹೆಚ್ಚುವರಿ ಬಳಕೆ, ಅನಗತ್ಯ ಇಂಧನ ಬಳಕೆ ಕಡಿತ ಹಾಗೂ ಅಗತ್ಯವಿಲ್ಲದ ಪ್ರಯಾಣಗಳನ್ನು ತಪ್ಪಿಸುವಂತೆ ಕರೆ ನೀಡಲಾಗಿದೆ. ಸಭೆಗಳು ಮತ್ತು ಅಧಿಕೃತ ಕಾರ್ಯಗಳನ್ನು ಸಾಧ್ಯವಾದಷ್ಟು ಆನ್‌ಲೆ೦ಸ್ಯನ್ ಮೂಲಕ ನಡೆಸುವಂತೆ ಸೂಚಿಸಲಾಗಿದೆ. ಪಶ್ಚಿಮ ಏಷ್ಯಾದ ಅಸ್ಥಿರತೆಯಿಂದ ಉಂಟಾದ ಜಾಗತಿಕ ಆರ್ಥಿಕ ಒತ್ತಡಗಳಿಗೆ ಪ್ರತಿಕ್ರಿಯೆಯಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗಿದೆ.

ಆಡಳಿತದ ಕಾರ್ಯಕ್ಷಮತೆ ಮತ್ತು ಭದ್ರತಾ ಮಾನದಂಡಗಳನ್ನು ಕಾಪಾಡಿಕೊಂಡೇ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಪ್ರಾಯೋಗಿಕ ಮಿತವ್ಯಯ ಕ್ರಮಗಳನ್ನು ಅನುಸರಿಸಬೇಕು ಎಂಬುದು ಪ್ರಧಾನಿ ಮೋದಿ ಆಶಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕ್ರಮಗಳ ಪರಿಣಾಮ ಈಗಾಗಲೇ ಬಿಜೆಪಿ ಆಡಳಿತದ ಹಲವು ರಾಜ್ಯಗಳಲ್ಲಿ ಕಾಣಿಸಿಕೊಳ್ಳತೊಡಗಿದೆ. ಹಲವು ನಾಯಕರು ತಮ್ಮ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಲು

# ಸಾಮಾಜಿಕ ಸುಧಾರಣೆಗಳ ನೆಪದಲ್ಲಿ ಧಾರ್ಮಿಕ ಗಡಿ ದಾಟಬೇಡಿ: ಸುಪ್ರೀಂ

**ನವದೆಹಲಿ, ಮೇ 13:** ಸಾಮಾಜಿಕ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಕಾನೂನು ಅಥವಾ ನ್ಯಾಯಾಲಯಗಳು ಧರ್ಮದ ಮೂಲಭೂತ ಆಚರಣೆಗಳ ಲಕ್ಷ್ಮಣ ರೇಖೆ ದಾಟದಂತೆ ಅತ್ಯಂತ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. ಸಂವಿಧಾನದತ್ತವಾದ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಮಾಜ ಸುಧಾರಣೆಯ ನಡುವೆ ಸೂಕ್ತ ಸಮತೋಲನ ಕಾಯ್ದುಕೊಳ್ಳುವುದು ಭಾರತದಂತಹ ಬಹುತ್ವ ರಾಷ್ಟ್ರದಲ್ಲಿ ಅತಿಮುಖ್ಯವಾಗಿದೆ ಎಂದು ಉನ್ನತ ನ್ಯಾಯಪೀಠ ಪ್ರತಿಪಾದಿಸಿದೆ.



ಭಾರತೀಯ ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬ ನಾಗರಿಕನಿಗೂ ತನಗೆ ಇಷ್ಟವಾದ ಧರ್ಮವನ್ನು ಮುಕ್ತವಾಗಿ ನಂಬುವ, ಆಚರಿಸುವ ಹಾಗೂ ಪ್ರಚಾರ ಮಾಡುವ ಮೂಲಭೂತ ಹಕ್ಕನ್ನು ನೀಡಿದೆ. ಅದೇ ವಿಧಿಯ ಅಡಿಯಲ್ಲಿ, ಸಮಾಜದಲ್ಲಿನ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಅಥವಾ ಸಾಮಾಜಿಕ ಕಲ್ಯಾಣಕ್ಕಾಗಿ ಕಾಯ್ದೆಗಳನ್ನು ರೂಪಿಸುವ ಅಧಿಕಾರವನ್ನೂ ಸರ್ಕಾರಕ್ಕೆ ನೀಡಲಾಗಿದೆ. ಆದರೆ, ಈ ಸಾಮಾಜಿಕ ಸುಧಾರಣೆಯ ಪ್ರಕ್ರಿಯೆಯು ಯಾವುದೇ ಒಂದು ಧರ್ಮದ ಅಗತ್ಯ ಧಾರ್ಮಿಕ ಆಚರಣೆಗಳ ತಿರುಳನ್ನು ಹತ್ತಿಕ್ಕುವಂತಿರಬಾರದು ಎಂಬುದನ್ನು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಧಾರ್ಮಿಕ ನಂಬಿಕೆಗಳು ಮತ್ತು ಜಾತ್ಯತೀತ ಮೌಲ್ಯಗಳ ನಡುವೆ ಸಂಘರ್ಷ ಏರ್ಪಟ್ಟಾಗ, ನ್ಯಾಯಾಲಯಗಳು ಅತ್ಯಂತ ಸೂಕ್ಷ್ಮವಾಗಿ ವರ್ತಿಸಬೇಕಾಗುತ್ತದೆ. ಸಮಾಜಕ್ಕೆ ಮಾರಕವಾದ, ತಾರತಮ್ಯದಿಂದ ಕೂಡಿದ ಅಥವಾ ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಗೆ ಧಕ್ಕೆ ತರುವ ಆಚರಣೆಗಳನ್ನು ರದ್ದುಪಡಿಸುವ ಹಕ್ಕು ನ್ಯಾಯಾಂಗಕ್ಕಿದೆ. ಆದರೆ, ಕೇವಲ ಸುಧಾರಣೆಯ ಹೆಸರಿನಲ್ಲಿ ಧಾರ್ಮಿಕ ವಿಧಿವಿಧಾನಗಳ ಆಳಕ್ಕೆ ಇಳಿಯುವುದು, ಆಯಾ ಧರ್ಮದ ಪಾವಿತ್ರ್ಯಕ್ಕೆ ಧಕ್ಕೆ ತರುವುದು ಅಥವಾ ಧರ್ಮಶಾಸ್ತ್ರಗಳ ವ್ಯಾಖ್ಯಾನಕ್ಕೆ ಮುಂದಾಗುವುದು ಲಕ್ಷ್ಮಣರೇಖೆಯನ್ನು ಉಲ್ಲಂಘಿಸಿದಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದೆ.

ಈ ಹಿಂದಿನ ಹಲವು ಪ್ರಮುಖ ತೀರ್ಪುಗಳಲ್ಲಿ (ಉದಾಹರಣೆಗೆ: 1954ರ ಶಿರೂರ್ ಮಠ ಪ್ರಕರಣ) ಸುಪ್ರೀಂ ಕೋರ್ಟ್ ಇದೇ ಅಗತ್ಯ ಧಾರ್ಮಿಕ ಆಚರಣೆಯ ಸಿದ್ಧಾಂತವನ್ನು ರೂಪಿಸಿತ್ತು. ಧರ್ಮದ ಅಸ್ತಿತ್ವಕ್ಕೆ ಯಾವ ಆಚರಣೆಗಳು ಅನಿವಾರ್ಯವೋ, ಅವುಗಳಲ್ಲಿ ಹಸ್ತಕ್ಷೇಪ ಮಾಡದಿರುವುದು ನ್ಯಾಯಾಲಯದ ನಡೆಯಾಗಿದೆ. ಕೇವಲ ಮೂಢನಂಬಿಕೆ ಅಥವಾ ಶೋಷಣೆಗೆ ಕಾರಣವಾಗುವ, ಧರ್ಮದ ಮೂಲ ತತ್ವಗಳಿಗೆ ಸಂಬಂಧಪಡದ ಆಚರಣೆಗಳನ್ನಷ್ಟೇ ಸಾಮಾಜಿಕ ಸುಧಾರಣೆಯ ಅಡಿಯಲ್ಲಿ ಪ್ರಶ್ನಿಸಬಹುದು ಎಂಬುದು ಭಾರತೀಯ ನ್ಯಾಯಿಕ ಇತಿಹಾಸದ ವಾಸ್ತವಿಕ ಅಂಶವಾಗಿದೆ.

ಆಧುನಿಕ ಸಮಾಜ ನಿರ್ಮಾಣದತ್ತ ಹೆಜ್ಜೆ ಹಾಕುವಾಗ, ಶಾಸಕಾಂಗವು ಕಾನೂನುಗಳನ್ನು ರೂಪಿಸುವಾಗ ಮತ್ತು ನ್ಯಾಯಾಂಗವು ತೀರ್ಪುಗಳನ್ನು ನೀಡುವಾಗ ಜನರ ಧಾರ್ಮಿಕ ನಂಬಿಕೆಗಳ ಸೂಕ್ಷ್ಮತೆಯನ್ನು ಗೌರವಿಸಬೇಕು. ಸುಧಾರಣೆಗಳೆಂಬುದು ಸಮಾಜದ ಒಳಿತಿಗಾಗಿ ಇರಬೇಕೇ ಹೊರತು, ಧಾರ್ಮಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಅಸ್ತ್ರವಾಗಬಾರದು ಎಂಬ ಸ್ಪಷ್ಟ ಸಂದೇಶವನ್ನು ಸುಪ್ರೀಂ ಕೋರ್ಟ್‌ನ ಈ ನಿಲುವು ಸಾರುತ್ತದೆ.

# ಚುನಾವಣೆ ಮುಗಿಯುವವರೆಗೂ ದೇಶದ ಚಿಂತೆ ಇರಲಿಲ್ಲವೇ?

ನವದೆಹಲಿ, ಮೇ 13: ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ ಎಂದು ಪ್ರಧಾನಿ ನರೇಂದ್ರ ಮೋದಿ ಈಗ ಸಲಹೆ ನೀಡುತ್ತಿದ್ದಾರೆ ಅವರಿಗೆ ಚುನಾವಣೆ ಮುಗಿಯುವವರೆಗೂ ದೇಶದ ಚಿಂತೆ ಇರಲಿಲ್ವ ಎಂದು ಸಚಿವ ಎಚ್.ಕೆ ಪಾಟೀಲ್ ಪ್ರಶ್ನಿಸಿದ್ದಾರೆ.

ದೆಹಲಿಯಲ್ಲಿ ಮಾತನಾಡಿದ ಅವರು, ಇಂತಹ ಗಂಭೀರ ವಿಚಾರಗಳನ್ನು ಸಂಸತ್ ನಲ್ಲಿ ಈ ಬಗ್ಗೆ ಚರ್ಚೆ ಮಾಡಬೇಕಿತ್ತು ಸರ್ಕಾರ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕು ಮೋದಿ ಅವರು ಉಳಿತಾಯದ ಹೇಳಿಕೆ ನೀಡಿದ ಬೆನ್ನಲ್ಲೇ 200 ಕಾರ್ ಮೋದಿ ಅವರನ್ನು ಫಾಲೋ ಮಾಡ್ತಿದ್ದವು. ಅವರ ಹಿಂದೆ ಸರ್ಕಾರಿ ಪಕ್ಷದ ಕಾರುಗಳು ಸಂಚರಿಸುತ್ತಿದ್ದವು ಕನಿಷ್ಠ ಹೇಳಿದಂತೆ ನಡೆದುಕೊಳ್ಳಬೇಕು ಅವರಿಗೆ ನಾಚಿಕೆ ಆಗಲ್ಲವೇ ಎಂದು ಪ್ರಶ್ನಿಸಿದರು. ವಾಹನಗಳು ಕಡಿಮೆ ಮಾಡಿ ಅಂತಾ ಹೇಳುತ್ತಿದ್ದೇನೆ ಹಾಗಂತ ಭದ್ರತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಿ ಅಂತಾ ಹೇಳುತ್ತಿಲ್ಲ ಅನವಶ್ಯಕ ಪ್ರಧಾನಿ ಹಿಂದೆ ಕಾರುಗಳು ಸಂಚರಿಸುತ್ತಿದ್ದರೆ ಜನರು ನಿಮ್ಮ ಮಾತು ಯಾಕೆ ಕೇಳಬೇಕು.



■ ಪ್ರಧಾನಿಯವರ ಉಳಿತಾಯ ಸಲಹೆಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಎಚ್.ಕೆ ಪಾಟೀಲ್

ಚಿನ್ನ ಖರೀದಿ ಮಾಡಬೇಡಿ ಎನ್ನುವುದರಲ್ಲಿ ತಪ್ಪು ಹುಡುಕುವುದಿಲ್ಲ 10–20 ಗ್ರಾಂ ಖರೀದಿಯಿಂದ ದೇಶಕ್ಕೆ ಆಮದು ಅಗತ್ಯ ಇಲ್ಲ. ದೊಡ್ಡ ಪ್ರಮಾಣದ ಖರೀದಿ ನಿಲ್ಲಿಸಬೇಕಿದೆ. ಭಾರತಕ್ಕೆ ಬರುವ ಚಿನ್ನವನ್ನು ತಡೆಯಿರಿ ನಿರ್ಬಂಧಿಸಿ, ಇಷ್ಟುದಿನ ಕಳ್ಳಸಾಗಣೆಗೆ ಬಿಟ್ಟು ಈಗ ಹೇಳಿದರೆ ಪ್ರಧಾನಿ ಮೋದಿ ವಿಶ್ವಾಸರ್ಹತೆ ಕಳೆದುಕೊಂಡಿದ್ದಾರೆ

ಮದುವೆ, ತಾಳಿ ಬಗ್ಗೆ ಮಾತನಾಡಬೇಡಿ, ಆಮದು ಸಂಪೂರ್ಣವಾಗಿ ನಿಲ್ಲಿಸಿ, ನಿರ್ಬಂಧ ಮಾಡಲ್ಲ, ಮೋದಿ ಸರ್ಕಾರಕ್ಕೆ ಇದು ಮಜಾ ಮಾಡುವ ವಿಚಾರವಾಗಿದೆ ಇದನ್ನು ನಿರ್ಬಂಧ ಮಾಡದಿದ್ದರೆ ಇದು ಪ್ರಚಾರಕ್ಕೆ ಮಾಡಿದ ಪ್ರಯತ್ನ ಎನ್ನಬಹುದು. ಆನ್‌ಲೈನ್ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದೀರಿ, ಶಿಕ್ಷಣ ವ್ಯವಸ್ಥೆ ಹಾಳು ಮಾಡುತ್ತಿದ್ದೀರಾ ಹೀಗೆ ಮಾಡಿದರೆ ಶಿಕ್ಷಣ ವ್ಯವಸ್ಥೆ ಹಾಳಾಗಲಿದೆ ಇಂತಹ ಜೊಳ್ಳು ಮಾತು ಬಿಡಿ ಎಂದು ಕುಟುಕಿದರು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಮಾತನಾಡಿ, ಈ ಬೆಳವಣಿಗೆ ಆ ವಿಶ್ವಾಸ ಕಮರಿಸುವಂತೆ ಮಾಡಿದೆ. 25 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ತಂತ್ರಜ್ಞಾನ ಇಷ್ಟು ಮುಂದುವರಿದಿರುವಾಗ ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಯಾಕೆ ಸಾಧ್ಯವಿಲ್ಲ ವಿದ್ಯಾರ್ಥಿಗಳು ಆಕ್ರೋಶದಲ್ಲಿ ನ್ಯಾಯ ಇದೆ ಎಂದರು.


# ಜಾಗತಿಕ ತೈಲ ದಾಸ್ತಾನುಗಳಲ್ಲಿ ಭಾರಿ ಇಳಿಕೆ: ಬೆಲೆ ಏರಿಕೆ ಭೀತಿ?

**ಪ್ಯಾರಿಸ್, ಮೇ 13:** ಇರಾನ್ ವಿರುದ್ಧ ನಡೆಯುತ್ತಿರುವ ಯುಎಸ್–ಇಸ್ರೇಲ್ ಯುದ್ಧದಿಂದ ಉಂಟಾದ ಅಡಚಣೆಗಳಿಂದಾಗಿ ಜಾಗತಿಕ ತೈಲ ದಾಸ್ತಾನುಗಳು ವೇಗವಾಗಿ ಕ್ಷೀಣಿಸುತ್ತಿವೆ. ಇದು ಮುಂದಿನ ದಿನಗಳಲ್ಲಿ ತೈಲಬೆಲೆ ಮತ್ತಷ್ಟು ಏರಿಕೆಯಾಗುವ ಭೀತಿಯನ್ನು ಒಡ್ಡಿದೆ ಎಂದು ಅಂತರಾಷ್ಟ್ರೀಯ ಇಂಧನ ಸಂಸ್ಥೆ (IEA) ಎಚ್ಚರಿಸಿದೆ.

ಇಂದು ಬಿಡುಗಡೆಯಾದ ತನ್ನ ಮಾಸಿಕ ತೈಲ ಮಾರುಕಟ್ಟೆ ವರದಿಯಲ್ಲಿ **IEA**, "ಮಧ್ಯಪ್ರಾಚ್ಯದ ಪೂರೈಕೆಯಲ್ಲಿ ಭಾರಿ ಅಡಚಣೆ ಎದುರಿಸುತ್ತಿರುವ ಆಮದು ಮಾಡಿಕೊಳ್ಳುವ ದೇಶಗಳು, ದಾಖಲೆ ಮಟ್ಟದಲ್ಲಿ ತೈಲ ದಾಸ್ತಾನುಗಳನ್ನು ಬಳಸಿಕೊಳ್ಳುತ್ತಿವೆ," ಎಂದು ತಿಳಿಸಿದೆ. "ನಿರಂತರ ಅಡಚಣೆಗಳ ನಡುವೆ ದಾಸ್ತಾನುಗಳು ವೇಗವಾಗಿ ಕ್ಷೀಣಿಸುತ್ತಿರುವುದು ಭವಿಷ್ಯದಲ್ಲಿ ಬೆಲೆ ಏರಿಕೆಯ ಸೂಚನೆಯಾಗಿರಬಹುದು" ಎಂದು ಸಿಎನ್‌ಎನ್ ವರದಿ ಮಾಡಿದೆ.

ವರದಿಯ ಸಂಶೋಧನೆಗಳ ಪ್ರಕಾರ, ಜಾಗತಿಕ ತೈಲ ದಾಸ್ತಾನುಗಳು ಯುದ್ಧಪೂರ್ವ ಮಟ್ಟಕ್ಕಿಂತ ಭಾರಿ ಕುಸಿತ ಕಂಡಿವೆ. ಮಾರ್ಚ್ ಮತ್ತು ಏಪ್ರಿಲ್ ನಡುವೆ 246 ದಶಲಕ್ಷ ಬ್ಯಾರಲ್‌ಗಳಷ್ಟು ಇಳಿಕೆಯಾಗಿ ಕೇವಲ 7.9 ದಶಲಕ್ಷ ಬ್ಯಾರಲ್‌ಗಳಿಗೆ ತಲುಪಿದೆ. ಏಪ್ರಿಲ್‌ನಲ್ಲಿ ಜಾಗತಿಕ ತೈಲ ದಾಸ್ತಾನುಗಳಿಂದ ಪ್ರತಿದಿನ ಬಳಸಲಾದ ಪ್ರಮಾಣವು ಕೆನಡಾ ಮತ್ತು ಯುಕೆಯ ಒಟ್ಟು ದೈನಂದಿನ ಬಳಕೆಗೆ ಸಮಾನವಾಗಿದೆ ಎಂದು ವರದಿ ತೋರಿಸುತ್ತದೆ.

**ಅಂತರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ) ಎಚ್ಚರಿಕೆ**




ಇರಾನ್ ದಿಗ್ಬಂಧನದ ನಂತರ ಹಾರ್ಮುಜ್ ಜಲಸಂಧಿಯಿಂದ ಉಂಟಾದ ಪೂರೈಕೆ ನಷ್ಟವು ಈಗ 100 ಕೋಟಿ ಬ್ಯಾರಲ್‌ಗಳನ್ನು ಮೀರಿದೆ. ಬೆಲೆ ಏರಿಕೆ ಮತ್ತು ಸೀಮಿತ ಪೂರೈಕೆಗೆ ಪ್ರತಿಕ್ರಿಯೆಯಾಗಿ ವ್ಯಾಪಾರ ಸಂಸ್ಥೆಗಳು ಮತ್ತು ಮನೆಬಳಕೆದಾರರು ಬಳಕೆಯನ್ನು ಕಡಿತಗೊಳಿಸಿದ್ದರಿಂದ ಜಾಗತಿಕ ತೈಲ ಬೇಡಿಕೆಯು ನಾಟಕೀಯವಾಗಿ ಕುಸಿದಿದೆ.

IEA ಅಂಕಿಅಂಶಗಳ ಪ್ರಕಾರ, ಪೆಟ್ರೋ ಕೆಮಿಕಲ್ ವಲಯವು "ಅತಿ ಹೆಚ್ಚು ನಷ್ಟ" ಅನುಭವಿಸಿದೆ. ಇಲ್ಲಿ ಪ್ಲಾಸ್ಟಿಕ್, ರಸಗೊಬ್ಬರ ಮತ್ತು ಔಷಧಗಳಂತಹ ಪ್ರಮುಖ ವಸ್ತುಗಳನ್ನು ತಯಾರಿಸಲು ತೈಲ ಮತ್ತು ನೈಸರ್ಗಿಕ ಅನಿಲದ ಕೊರತೆಯಿದೆ.

ವಿಮಾನಯಾನ ವಲಯವೂ ಸಹ ಭಾರಿ ಹೊಡೆತ ತಿಂದಿದ್ದು, ವಿಶ್ವಾದ್ಯಂತ ಹಾರಾಟ ನಡೆಸುವ ಒಟ್ಟು ವಿಮಾನಗಳ ಸಂಖ್ಯೆ ಸಾಮಾನ್ಯ ಮಟ್ಟಕ್ಕಿಂತ ಗಣನೀಯವಾಗಿ ಕಡಿಮೆಯಾಗಿದೆ. ಇದು ಜೆಟ್ ಇಂಧನ ಬೆಲೆಗಳ ಮೇಲಿನ ಒತ್ತಡವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಸಹಾಯ ಮಾಡಿದೆ. ಮಧ್ಯಪ್ರಾಚ್ಯದ ರಫ್ತು ಸ್ಥಗಿತಗೊಂಡ ನಂತರ ಜೆಟ್ ಇಂಧನ ಬೆಲೆಗಳು ಮೂರು ಪಟ್ಟು ಹೆಚ್ಚಾಗಿತ್ತು ಎಂದು ಸಂಸ್ಥೆ ಸೇರಿಸಿದೆ. "ಬೇಡಿಕೆಯ ನಾಶವು ಯುದ್ಧದ ಪ್ರಾರಂಭದಿಂದಲೂ ತೈಲ ಬೆಲೆಗಳಲ್ಲಿ ಕಂಡುಬಂದ ಏರಿಕೆಯಿಂದ ಬೆಂಬಲಿತವಾಗಿದೆ." **IEA** ಈಗ ಈ ವರ್ಷದ ಜಾಗತಿಕ ತೈಲ ಬೇಡಿಕೆಯನ್ನು ಪ್ರತಿದಿನಕ್ಕೆ 104 ಶತಕೋಟಿ ಬ್ಯಾರಲ್‌ಗಳಷ್ಟು ಎಂದು ಅಂದಾಜಿಸಿದೆ, ಇದು ಯುದ್ಧಪೂರ್ವ ಮುನ್ಸೂಚನೆಗಿಂತ ದಿನಕ್ಕೆ 1.3 ದಶಲಕ್ಷ ಬ್ಯಾರಲ್‌ಗಳಷ್ಟು ಕಡಿಮೆಯಾಗಿದೆ.

# ಭಾರತದ ಜಿಡಿಪಿ ಬೆಳವಣಿಗೆ ಶೇ.6.7ಕ್ಕೆ ಏರಿಕೆ

■ ಮೋರ್ಗನ್ ಸ್ಟಾನ್ಲಿ ಅಂದಾಜು

ನವದೆಹಲಿ, ಮೇ 13: ಭಾರತದ FY27ರ (ಹಣಕಾಸು ವರ್ಷ 2026–27) ಜಿಡಿಪಿ ಬೆಳವಣಿಗೆ ಶೇ.6.7ಕ್ಕೆ ಏರಿಕೆ ಯಾಗಲಿದೆ ಎಂದು ಜಾಗತಿಕ ಹಣಕಾಸು ಸೇವೆಗಳ ಕ್ಷೇತ್ರದಲ್ಲಿ ಮುಂಚೂಣಿ ಸಂಸ್ಥೆಯಾಗಿರುವ ಮೋರ್ಗನ್ ಸ್ಟಾನ್ಲಿ ಅಂದಾಜಿಸಿದೆ. ಪಶ್ಚಿಮ ಏಷ್ಯಾದಲ್ಲಿನ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ಹೊರತಾಗಿಯೂ, ಮೋರ್ಗನ್ ಸ್ಟಾನ್ಲಿ ಸಂಸ್ಥೆಯು ಭಾರತದ ಈ ಹಣಕಾಸು ವರ್ಷದ ಬೆಳವಣಿಗೆಯ ಅಂದಾಜನ್ನು ಏಪ್ರಿಲ್ 2026ರಲ್ಲಿ ನೀಡಿದ್ದ ಶೇ. 6.2ರಿಂದ ಶೇ. 6.7ಕ್ಕೆ ಏರಿಸಿದೆ.

ಹಿಂದೆ ಏಪ್ರಿಲ್ 2026ರಲ್ಲಿ, ಸಂಸ್ಥೆಯು ಕಚ್ಚಾತೈಲ ಬೆಲೆಯು 2027ರಲ್ಲಿ ಸರಾಸರಿ ಪ್ರತಿ ಬ್ಯಾರೆಲ್‌ಗೆ $95 ಇರಬಹುದೆಂದು ಅಂದಾಜಿಸಿತ್ತು ಮತ್ತು ಅನಿಲ ಲಭ್ಯತೆಯ ಕೊರತೆಯು ಬೆಳವಣಿಗೆಗೆ ಅಡ್ಡಿಯಾಗಬಹುದು ಎಂದು ಹೇಳಿತ್ತು. ಈಗ ಈ ಕಚ್ಚಾತೈಲ ಬೆಲೆಯ ಮುನ್ಸೂಚನೆಯನ್ನು ಪ್ರತಿ ಬ್ಯಾರಲ್‌ಗೆ 87.5 ಡಾಲರ್‌ಗೆ ಇಳಿಸಲಾಗಿದೆ.

ಮೋರ್ಗನ್ ಸ್ಟಾನ್ಲಿಯ ಮುಖ್ಯ ಭಾರತೀಯ ಅರ್ಥಶಾಸ್ತ್ರಜ್ಞರಾದ ಉಪಾಸನಾ ಚಾಚ್ರಾ ಅವರು ಬನಿ ಗಂಭೀರ್ ಮತ್ತು ಶ್ರೇಯಾ ಸಿಂಗ್ ಅವರೊಂದಿಗೆ ಬರೆದಿರುವ ಟಿಪ್ಪಣಿಯಲ್ಲಿ ಹೀಗೆ ತಿಳಿಸಿದ್ದಾರೆ "ನಮ್ಮ ಮೂಲ ಅಂದಾಜಿನ ಪ್ರಕಾರ, ಜಾಗತಿಕ ತೈಲ ಬೆಲೆಗಳು ಜೂನ್ 2026 ಕ್ಕೆ ಕೊನೆಗೊಳ್ಳುವ ತ್ರೈಮಾಸಿಕದಲ್ಲಿ (QE Jun-26) ಗರಿಷ್ಠ ಮಟ್ಟಕ್ಕೆ ತಲುಪಲಿವೆ ಮತ್ತು 2027ರಲ್ಲಿ ಸರಾಸರಿ 87.5 ಡಾಲರ್‌ಗೆ ಇರಲಿದೆ. ನಾವು 2027ರಲ್ಲಿ ಶೇ. 6.7 ರಷ್ಟು ಮತ್ತು 2028ರಲ್ಲಿ ಶೇ. 7 ರಷ್ಟು ಜಿಡಿಪಿ ಬೆಳವಣಿಗೆಯನ್ನು ನಿರೀಕ್ಷಿಸುತ್ತೇವೆ. ಜೂನ್ 2026 ರ ತ್ರೈಮಾಸಿಕದಲ್ಲಿ ಇಂಧನ ಬೆಲೆಗಳ ಏರಿಕೆ ಮತ್ತು ಪೂರೈಕೆ ಸರಪಳಿಯ ಘರ್ಷಣೆಗಳಿಂದಾಗಿ ಬೆಳವಣಿಗೆಯು ಶೇ. 6.5 ಕ್ಕೆ ಕುಸಿಯಬಹುದು. ತದನಂತರ, ಪೂರೈಕೆಯ ಅಡೆತಡೆಗಳು ಕಡಿಮೆಯಾದಂತೆ ಮತ್ತು ಸರಕುಗಳ ಬೆಲೆಗಳು ಮಿತವಾಗುತ್ತಿದ್ದಂತೆ, ಆರ್ಥಿಕ ಚಟುವಟಿಕೆಗಳು ಸಹಜಸ್ಥಿತಿಗೆ ಮರಳುತ್ತವೆ ಮತ್ತು ಮಾರ್ಚ್ 2027 ರ ವೇಳೆಗೆ ಬೆಳವಣಿಗೆಯು ಸಾಮಾನ್ಯಮಟ್ಟಕ್ಕೆ ಬರಲಿದೆ ಎಂದು ನಾವು ನಿರೀಕ್ಷಿಸುತ್ತೇವೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವ

# ಶೇರ್ ಟು ಶೈನ್: ನಿಷ್ಕಾಮ ಸೇವೆಯ ಅಂತರಂಗ

**ನಾಲ್ಕನೇ ವಯಸ್ಸಿನಲ್ಲಿ ನನ್ನ ತಂದೆಯನ್ನು ಕಳೆದುಕೊಂಡೆ. ಆಗ ನಾನು ಕಟಕ್‌ನ ಕಲಾರಬಂಕಾ ಗ್ರಾಮದಲ್ಲಿದ್ದೆ. ನನ್ನ ತಾಯಿಗೆ ಏಳು ಮಕ್ಕಳು. ನಮ್ಮನ್ನೆಲ್ಲ ಅವರು ಸಾಕಷ್ಟು ಬಡತನದಲ್ಲಿ ಬೆಳೆಸಿದ್ದರು. ತುತ್ತು ಅನ್ನಕ್ಕೂ ಗತಿ ಇಲ್ಲದ ದಿನಗಳಿದ್ದವು. ನಾನು ಐದು ವರ್ಷವಿದ್ದಾಗ ಕೆಲವು ಕೆಲವು ಆಣೆಗಳನ್ನು ಸಂಪಾದಿಸಲು ಸಣ್ಣಪುಟ್ಟ ಕೆಲಸಗಳನ್ನು ಮಾಡಲು ಆರಂಭಿಸಿದೆ. ನಾನು ಗಳಿಸಿದ್ದನ್ನೆಲ್ಲಾ ನನ್ನ ಸ್ನೇಹಿತರೊಂದಿಗೆ ಹಂಚಿಕೊಂಡೆ. ಚಹಾ, ತಿಂಡಿಗಳು ಹೀಗೆ ಹಲವಾರು. ಒಂದು ವೇಳೆ ಚಲನಚಿತ್ರಕ್ಕಾಗಿ ಹಣವನ್ನೂ ಬೇರೆಯವರಿಗೆ ನೀಡಿದೆ. ನನಗೆ ನಿಷ್ಕಾಮ ಎಂಬ ಪದದ ಬಗ್ಗೆ ಆಗ ತಿಳಿದಿರಲಿಲ್ಲ. ನಾನು ಗೀತೆಯನ್ನು ಓದಿರಲಿಲ್ಲ. ಹಂಚಿಕೊಳ್ಳುವುದು ಸರಿ ಎಂದು ಮಗುವಾಗಿದ್ದಾಗಲೇ ತಿಳಿದಿತ್ತು.**

**ನನಗೇನಾದರೂ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿ ಏನನ್ನೂ ಯಾರಿಗೂ ಕೊಡಬೇಡಿ. ಇತರರು ನೋಡಲಿ ಎಂದು ನೀಡಬೇಡಿ. ಒಂದು ಮೇಣದಬತ್ತಿ ಇನ್ನೊಂದನ್ನು ಬೆಳಗಿಸಿದಾಗ ಅದರ ಪ್ರಕಾಶಮಾನ ಕಡಿಮೆಯಾಗುವುದಿಲ್ಲ. ಒಬ್ಬ ವ್ಯಕ್ತಿಯು ದಾನ ಮಾಡಿದಾಗ, ಮೆದುಳಿನ ಮೆಸೊಲಿಂಬಿಕ್ ವ್ಯವಸ್ಥೆಯು ಸಕ್ರಿಯಗೊಳ್ಳುತ್ತದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ.**

ಒಂದು ಪ್ರಶ್ನೆ ಇದೆ. ಈ ಪ್ರಶ್ನೆ ಶತಮಾನಗಳಿಂದ ಅಸಂಖ್ಯಾತ ತತ್ವಜ್ಞಾನಿಗಳು, ಸಂತರು ಮತ್ತು ವಿಜ್ಞಾನಿಗಳನ್ನು ಕಾಡುತ್ತಲೇ ಬಂದಿದೆ. ಇದು ತುಂಬಾ ಸರಳ. ಎಷ್ಟು ಸರಳ ಎಂದರೆ ಒಂದು ಮಗು ಸಹ ಇದನ್ನು ಕೇಳ ಬಹುದು. ಆ ಪ್ರಶ್ನೆಯೇ ಇತರರಿಗೆ ದಾನ ಕೊಡುವುದು ಏಕೆ ಒಳ್ಳೆಯದಾಗುತ್ತದೆ? ಎಂಬುದು. ಸಾಮಾನ್ಯವಾಗಿ ನಾವೆಲ್ಲ ಸ್ವೀಕರಿ ಸುವುದು ಒಳ್ಳೆಯದೆಂದು ಭಾವಿಸುತ್ತೇವೆ. ಆದರೆ ಅದು ಒಳ್ಳೆಯದಲ್ಲ. ಪಡೆಯುವ ವೇಳೆ ಗರಿಷ್ಠ ಮಟ್ಟದ ಆನಂದ ತಲುಪುತ್ತೇವೆ. ಆದರೆ ಆ ಖುಷಿ ತಕ್ಷಣವೇ ಮಸುಕಾಗಲು ಪ್ರಾರಂಭಿಸುತ್ತದೆ. ಸ್ವಾಧೀನದ ಆನಂದ ಕ್ಷಣಿಕ. ಆದರೆ ಕೊಡುವುದು ಸಂಪೂರ್ಣವಾಗಿ ವಿಭಿನ್ನ ರೀತಿಯ ಒಳ್ಳೆಯತನ. ಸ್ಥಿರವಾದ, ಶಾಂತ, ಶಾಶ್ವತ ವಾದ ಖುಷಿ. ಇಡೀ ಪ್ರಪಂಚವೆಲ್ಲ ಮರೆತರೂ ನಿಮ್ಮಲ್ಲಿ ರುವ ಆನಂದವು ಸದಾ ಉಳಿದುಬಿಡುತ್ತದೆ. ಖುಷಿಯನ್ನು ನಿಮ್ಮ ಹೃದಯದಲ್ಲಿ ಕಾಪಿಡುತ್ತದೆ. ಏಕಂದರೆ ಪ್ರತಿಯಾಗಿ ಏನನ್ನೂ ಇಲ್ಲಿ ಕೇಳಿರುವುದಿಲ್ಲ. ಇನ್ನೂ ವಿಚಿತ್ರವೆಂದರೆ, ನಿಮ್ಮನ್ನು ಖಾಲಿಯಾಗಿ ಮಾಡುವುದಿಲ್ಲ. ಬದಲಿಗೆ ಪೂರ್ಣವಾಗಿ ಅನುಭವಿಸುವಂತೆ ಮಾಡುವ ರೀತಿಯಂತೆ. ಪ್ರತಿಯೊಂದು ನಾಗರಿಕತೆಯು ಈ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದೆ. ಮತ್ತು ಪ್ರತಿ ಯೊಂದು ನಾಗರಿಕತೆಯು ಕೊನೆಗೆ ಅದೇ ಸ್ಥಳಕ್ಕೆ ಬಂದು ನಿಂತಿದೆ.

ಭಗವದ್ಗೀತೆಯು ಇದನ್ನು ನಿಷ್ಕಾಮ ಕರ್ಮ ಎಂದು ಹೇಳುತ್ತದೆ. ಮುಂದೆ ಸಿಗುವ ಫಲಿತಾಂಶದ ಮೇಲೆ ಅವ ಲಂಬನೆ ಇಲ್ಲದ ಕೆಲಸ. ನಿಮ್ಮಲ್ಲಿ ರುವುದನ್ನು ನೀಡಿ, ಮತ್ತು ಮುಕ್ತ ರಾಗಿ. ನನಗೇನಾದರೂ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿ ಏನನ್ನೂ ಯಾರಿಗೂ ಕೊಡಬೇಡಿ. ಇತರರು ನೋಡಲಿ ಎಂದು ನೀಡಬೇಡಿ. ಕೊಡು ವುದು ಆತ್ಮದ ಸಹಜವಾದ ಸ್ಥಿತಿ. ವಿಶ್ವದಲ್ಲಿ ತನ್ನ ಸ್ಥಾನವನ್ನು ಇದು ಅರ್ಥಮಾಡಿಕೊಂಡಿದೆ. ಸಿಗುವ ಫಲದ ಬಗ್ಗೆ ಹೇಳಿಕೊಳ್ಳುವುದು ನಿಮ್ಮದಲ್ಲ ಎಂದು ಭಗವಾನ್ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ. ಕ್ರಿಯೆ ಮಾತ್ರ ನಿಮ್ಮದು. ಮತ್ತು ನೀಡುವ ಕ್ರಿಯೆ ಸ್ವತಃ ಸಂಪೂರ್ಣ ವಾಗಿದೆ. ಬುದ್ಧನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಇದನ್ನು ಬೇರೆಯದೇ ರೀತಿಯಲ್ಲಿ ವ್ಯಾಖ್ಯಾನಿ ಸಿದ್ದಾನೆ. ಧ್ಯಾನದ ಮೊದಲು, ಶಿಸ್ತಿನ ಮೊದಲು, ಬುದ್ಧಿವಂತಿಕೆಯ ಮೊದಲು, ಜಾಗೃತಿಯ ಹಾದಿಯಲ್ಲಿ ಮೊದಲ ಹೆಜ್ಜೆಯಾಗಿ ದಾನ ವನ್ನು ಇರಿಸಿದನು. ಅದು ಅನಿಯಂತ್ರಿತ ಆದೇಶವಲ್ಲ ಬದಲಿಗೆ ಅದು ಆಳವಾದ ಒಳನೋಟವಾಗಿತ್ತು. ಸಂಗ್ರಹಿ ಸುವ ಕೈಗಳಿಂದ ಧ್ಯಾನ ಮಾಡಲು ಸಾಧ್ಯವಿಲ್ಲ. ಇತರ ರಿಂದ ಏನಾದರೂ ಸಿಗುತ್ತದೆ ಎಂದು ಅಂಟಿಕೊಳ್ಳುವ ಹೃದಯವು ಸ್ಥಿರವಾಗಿರಲು ಸಾಧ್ಯವಿಲ್ಲ. ಉದಾರತೆಯು ಜ್ಞಾನೋದಯದ ನಂತರ ಬೆಳೆಸಬೇಕಾದ ಸದ್ಗುಣವಲ್ಲ. ಅದು ಜ್ಞಾನೋದಯ ಪ್ರವೇಶಿಸುವ ಮಹಾನ್ ದ್ವಾರವಾಗಿದೆ.

ಖುರಾನ್‌ನಲ್ಲಿ ಸದಕಾದ ಬಗ್ಗೆ ಹೇಳಲಾಗುತ್ತದೆ. ಅದು ದಾನವಾಗಿ ಅಲ್ಲ, ಶುದ್ಧೀಕರಣವಾಗಿ. ನೀವು ನೀಡುವ ದಾನವು ನಿಮ್ಮ ಕೈಗಳನ್ನು ಬಿಡುವುದರಿಂದ ಪವಿತ್ರವಾಗು ವುದಿಲ್ಲ. ಅದನ್ನು ಬಿಟ್ಟುಬಿಡುವುದರಿಂದ ನೀವು ಸ್ಪಷ್ಟವಾಗುತ್ತೀರಿ. ತ್ಜೆದಕಾದ ಯಹೂದಿ ಸಂಪ್ರದಾಯವು ದಾನ ವನ್ನು ದಯೆಯ ಕ್ರಿಯೆ ಎಂದು ಕರೆಯಲು ನಿರಾಕರಿ ಸುತ್ತದೆ. ಅದನ್ನು ನ್ಯಾಯ ಎಂದು ಕರೆಯುತ್ತದೆ. ಹಂಚಿಕೊಳ್ಳುವುದು ಔದಾರ್ಯವಲ್ಲ. ಸಂಗ್ರಹಿಸುವುದು ತೊಂದರೆಗೊಳಗಾದ ಸಮತೋಲನದ ಪುನಃಸ್ಥಾಪನೆಯಾಗಿದೆ.

ಬುದ್ಧ ಮತ್ತು ಭಗವದ್ಗೀತೆಯ ನಂತರ ಇಪ್ಪತ್ತೈದು ಶತಮಾನಗಳ ತರುವಾಯು, ಆಧುನಿಕ ವಿಜ್ಞಾನವು ಅದೇ ಮನೆ ಬಾಗಿಲಿಗೆ ಬಂದಿದೆ. ಅಮೆರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಸಂಶೋಧಕರು ಈ ದಾನದ ಕುರಿತು ಒಂದು ಸಂಶೋಧನೆಯನ್ನು ಮಾಡಿದ್ದಾರೆ. ಒಬ್ಬ ವ್ಯಕ್ತಿಯು ದಾನ ಮಾಡಿದಾಗ, ಮೆದುಳಿನ ಮೆಸೊಲಿಂಬಿಕ್ ವ್ಯವಸ್ಥೆಯು ಸಕ್ರಿಯಗೊಳ್ಳುತ್ತದೆ ಎಂದು ಕಂಡುಕೊಂಡಿದ್ದಾರೆ. ಆಹಾರ ಸೇವಿಸಿದರೆ, ಸಂಗೀತ ಕೇಳೀದರೆ, ನೀವು ಪ್ರೀತಿಸುವವರ ಮುಖಕ್ಕೆ ಪ್ರತಿಕ್ರಿಯಿಸುವ ಅದೇ ನರಗಳು ದಾನ ಮಾಡಿದಾಗಲೂ ಪ್ರತಿಕ್ರಿಯಿಸುತ್ತವೆ. ನಮ್ಮ ದೇಹವು ಆಕ್ಸಿಟೋಸಿನ್ ಅನ್ನು ಬಿಡುಗಡೆ ಮಾಡು ತ್ತದೆ. ಎಂಡಾ ರ್ಫಿನ್‌ಗಳು ವ್ಯವಸ್ಥೆಯನ್ನು ತುಂಬುತ್ತವೆ. ಒತ್ತಡ ಮತ್ತು ಆತಂಕದ ಹಾರ್ಮೋನ್ ಕಾರ್ಟಿಸೋಲ್ ಕಡಿಮೆಯಾಗುತ್ತದೆ. ಕೊಡುವವನು ಕೇವಲ ಉತ್ತಮ ವಾಗುವುದಿಲ್ಲ. ಕೊಡುವವನು ಅಳೆಯಬಹುದಾದ, ಶಾರೀರಿಕ ಅರ್ಥದಲ್ಲಿ, ಆರೋಗ್ಯಕರನಾಗುತ್ತಾನೆ. ಸಕಾರಾತ್ಮಕ ಮನೋವಿಜ್ಞಾನದ ಸಂಸ್ಥಾಪಕ ಮಾರ್ಟಿನ್ ಸೆಲಿಗ್‌ಮನ್, ದಶಕಗಳ ಸಂಶೋಧನೆಯ ಮೂಲಕ ದಾನ ಇಲ್ಲವೇ ನಮ್ಮಲ್ಲಿನ ಔದಾರ್ಯವು ನಿರಂತರ ಮಾನವ ಏಳಿಗೆಯ ಅತ್ಯಂತ ವಿಶ್ವಾಸಾರ್ಹ ಮುನ್ಸೂಚಕಗಳಲ್ಲಿ ಒಂದಾಗಿದೆ ಎಂಬುದನ್ನು ದಾಖಲಿಸಿದ್ದಾರೆ.

ಯಾವುದೇ ಅತ್ಯಾಧುನಿಕ ಪ್ರಯೋಗಾಲಯಗಳು ಇಲ್ಲದೆಯೂ ಪ್ರಾಚೀನ ಕಾಲದಲ್ಲಿ ಜನರು ಇದನ್ನು ತಿಳಿ ದಿದ್ದರು. ಏಕೆಂದರೆ ಅವರು ಜೀವನವನ್ನು ಹಾಗೆಯೇ ಗಮನಿಸಿದ್ದರು. ಆದ್ದರಿಂದಲೇ ಅವರಿಗೆ ಅದು ತಿಳಿದಿತ್ತು. ಧಾನ್ಯವನ್ನು ಹಂಚಿಕೊಂಡ ರೈತನನ್ನು ಗಮನಿಸಿದರು ಮತ್ತು ಅವರ ಹೊಲಗಳು ಬಂಜರು ಬೆಳೆಯಲಿಲ್ಲ ಎಂದು ಗಮನಿಸಿದರು. ನೆರೆಹೊರೆಯಲ್ಲಿರುವ ಮಗುವಿಗೆ ಆಹಾರವನ್ನು ನೀಡುವ ತಾಯಿಯನ್ನು ಅವರು ಗಮನಿಸಿದರು ಮತ್ತು ಅವರ ಸ್ವಂತ ಮಕ್ಕಳು ಹಸಿವಿನಿಂದ ಬಳಲುತ್ತಿಲ್ಲ ಎಂದು ಗಮನಿಸಿದರು. ಏನೂ ಇಲ್ಲದ ಸಾಧುವನ್ನು ಅವರು ಗಮನಿಸಿದರು. ಅವರಿಗೆ ಜೀವನ ದಲ್ಲಿ ಏನೊಂದೂ ಕೊರತೆಯಿಲ್ಲ ಎಂದು ಗಮನಿಸಿದರು. ಹಂಚಿಕೊಳ್ಳುವುದರಿಂದ ಏನೂ ಕಡಿಮೆ ಯಾಗುವುದಿಲ್ಲ. ಅದು ಇನ್ನಷ್ಟು ಹೆಚ್ಚಿ ಸುತ್ತದೆ ಎಂಬ ಏಕೈಕ ತೀರ್ಮಾನಕ್ಕೆ ಅವರು ಬಂದರು. ನಾನು ಇದೆಲ್ಲ ಯಾವುದನ್ನೂ ಧರ್ಮಗ್ರಂಥದಿಂದ ಅಥವಾ ವಿಜ್ಞಾನ ದಿಂದ ಕಲಿತಿಲ್ಲ. ಬದಲಿಗೆ ನಾನು ಒಂದು ಕಪ್ ಚಹಾದಿಂದ ಕಲಿತಿದ್ದೇನೆ.



**‘ಶೇರ್ ಟು ಶೈನ್’ ತುಂಬಾ ಸರಳವಾಗಿದೆ. ನಮ್ಮಲ್ಲಿರುವುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದರಿಂದ ನಮಗೇನೂ ಕಡಿಮೆಯಾಗುವುದಿಲ್ಲ. ಬದಲಾಗಿ, ನಾವು ಪ್ರಕಾಶಮಾನರಾಗುತ್ತೇವೆ. ದಾನವು ಸಂಪತ್ತಿನ ವಿಷಯವಲ್ಲ, ಆದರೆ ಹೃದಯದ ವಿಷಯ**

ನಾಲ್ಕನೇ ವಯಸ್ಸಿ ನಲ್ಲಿ ನನ್ನ ತಂದೆಯನ್ನು ಕಳೆದುಕೊಂಡೆ. ಆಗ ನಾನು ಕಟಕ್‌ನ ಕಲಾರಬಂಕಾ ಗ್ರಾಮ ದಲ್ಲಿದ್ದೆ. ನನ್ನ ತಾಯಿಗೆ ಏಳು ಮಕ್ಕಳು. ನಮ್ಮನ್ನೆಲ್ಲ ಅವರು ಸಾಕಷ್ಟು ಬಡತನದಲ್ಲಿ ಬೆಳೆಸಿದ್ದರು. ತುತ್ತು ಅನ್ನಕ್ಕೂ ಗತಿ ಇಲ್ಲದ ದಿನಗಳಿದ್ದವು. ನಾನು ಐದು ವರ್ಷವಿದ್ದಾಗ ಕೆಲವು ಕೆಲವು ಆಣೆಗಳನ್ನು ಸಂಪಾ ದಿಸಲು ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಆರಂಭಿಸಿದೆ. ನಾನು ಗಳಿಸಿದ್ದನ್ನೆಲ್ಲಾ ನನ್ನ ಸ್ನೇಹಿತರೊಂದಿಗೆ ಹಂಚಿಕೊಂಡೆ. ಚಹಾ, ತಿಂಡಿಗಳು ಹೀಗೆ ಹಲವಾರು. ಒಂದು ವೇಳೆ ಚಲನಚಿತ್ರಕ್ಕಾಗಿ ಹಣವನ್ನೂ ಬೇರೆಯವರಿಗೆ ನೀಡಿದೆ. ನನಗೆ ನಿಷ್ಕಾಮ ಎಂಬ ಪದದ ಬಗ್ಗೆ ಆಗ ತಿಳಿದಿರಲಿಲ್ಲ. ನಾನು ಗೀತ ಯನ್ನು ಓದಿರಲಿಲ್ಲ. ಹಂಚಿಕೊಳ್ಳುವುದು ಸರಿ ಎಂದು ಮಗು ವಾಗಿ ತಿಳಿದಿತ್ತು. ಇಬ್ಬರು ಸೇರಿ ಚಹಾ ಕುಡಿದರೆ ಅದರ ರುಚಿ ಹೆಚ್ಚು ತ್ತದೆ. ಸ್ನೇಹಿತನೊಂದಿಗೆ ನಡೆದಾಗ ಮನೆಗೆ ಹೋಗುವ ಹಾದಿಯನ್ನು ಹಗುರಗೊಳಿಸುತ್ತದೆ. ಒಟ್ಟಿಗೆ ಜವಾಬ್ದಾರಿ ಹೊತ್ತುಕೊಂಡಾಗ ಅದು ಬಡತನ ವನ್ನು ಹೇಗಾದರೂ ಕಡಿಮೆ ಮಾಡುತ್ತದೆ. ಆ ಪ್ರವೃತ್ತಿ ನನ್ನನ್ನು ಬಿಡಲಿಲ್ಲ. ಅದು ಬೆಳೆಯಿತು. ಅದು ಕೆಐಐಟಿ ಆಯಿತು, ಎರಡು ಬಾಡಿಗೆ ಕೋಣೆಗಳಲ್ಲಿ ಐದು ಸಾವಿರ ರೂಪಾಯಿಗಳಿಂದ ನಿರ್ಮಿಸಿದ್ದು ಇಂದು ವಿಶ್ವವಿದ್ಯಾ ಲಯವಾಗಿದೆ. ಅದು ಕೆಐಎಸ್‌ಎಸ್ ಆಯಿತು, ಎಂಬತ್ತು ಸಾವಿರ ಬುಡಕಟ್ಟು ಮಕ್ಕಳಿಗೆ ಮನೆ ಮತ್ತು ಶಾಲೆಯಾ ಯಿತು. ಇದು ಎರಡು ಕೋಣೆಗಳಲ್ಲಿ ವಾಸಿಸುವ ಜೀವನ ವಾಯಿತು, ಆದರೆ ಸಂಸ್ಥೆಗಳು ಪ್ರಪಂಚದಾದ್ಯಂತ ಹರಡಿಕೊಂಡಿವೆ.

**2013ರಲ್ಲಿ, ಅದು ಆರ್ಟ್ ಆಫ್ ಗಿವಿಂಗ್ ಆಗಿ ಮಾರ್ಪಟ್ಟಿತು.**

ಆರ್ಟ್ ಆಫ್ ಗಿವಿಂಗ್ ಒಂದು ಸಂಘಟನೆಯಲ್ಲ. ಅದು ಒಂದು ಗುರುತಿಸುವಿಕೆ. ದಾನ ಮಾಡುವ ಬಯಕೆ ಹೊರಗಿನಿಂದ ಬೆಳೆಸಿಕೊಳ್ಳ ಬೇಕಾಗಿಲ್ಲ ಎಂದು ಗುರುತಿಸುವಿಕೆ. ಇದು ಈಗಾಗಲೇ ಪ್ರತಿಯೊಬ್ಬ ಮನುಷ್ಯನಲ್ಲೂ ಇದೆ. ಮುಂಜಾನೆ ಪಾರಿವಾಳಗಳಿಗೆ ಆಹಾರ ನೀಡುವ ಅಜ್ಜಿಯಲ್ಲಿ ಇದು ಇದೆ. ವೃದ್ಧ ಪ್ರಯಾಣಿಕನಿಗೆ ಶುಲ್ಕ ವಿಧಿಸದ ಆಟೋರಿಕ್ಷಾ ಚಾಲಕನಲ್ಲಿ, ಕಷ್ಟಪಡು ತ್ತಿರುವ ಸಹಪಾಠಿಗೆ ಮೊತ್ತವನ್ನು ವಿವರಿಸಲು ಹಿಂದೆ ಉಳಿಯುವ ವಿದ್ಯಾರ್ಥಿ ಯಲ್ಲಿ. ಇದು ಎಲ್ಲೆಡೆ ಇರುತ್ತದೆ. ಅದು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲು ಅನುಮತಿಯ ಅಗತ್ಯವಿದೆ.

ಹದಿಮೂರು ವರ್ಷಗಳ ನಂತರ, ಆರ್ಟ್ ಆಫ್ ಗಿವಿಂಗ್ ಬೃಹತ್ತಾಗಿ ವಿಸ್ತಾರವಾಗಿದೆ. 220 ದೇಶಗಳಲ್ಲಿ 20 ದಶಲಕ್ಷಕ್ಕೂ ಹೆಚ್ಚು ಜನರು ಇದರ ಆಚರಣೆಯ ಭಾಗವಾಗಿದ್ದಾರೆ. ಈ ವರ್ಷ, 2026ರಲ್ಲಿ, ವಿಶ್ವಸಂಸ್ಥೆಯು **ಸುಸ್ಥಿರ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಸ್ವಯಂಸೇವಕರ ವರ್ಷ**ವನ್ನು ಘೋಷಿಸಿದೆ ಮತ್ತು ಈ ಹಂಚಿಕೆಯ ಸಂದೇಶವನ್ನು ಮುಂದಕ್ಕೆ ಸಾಗಿಸಲು ಆರ್ಟ್ ಆಫ್ ಗಿವಿಂಗ್, ವಿಶ್ವ ಸಂಸ್ಥೆಯ ಸ್ವಯಂಸೇವಕರೊಂದಿಗೆ ಸಹಭಾಗಿತ್ವ ಹೊಂದಲು ಹೆಮ್ಮೆಪಡುತ್ತದೆ. ಈ ವರ್ಷದ ನಮ್ಮ ಥೀಮ್ **ಶೇರ್ ಟು ಶೈನ್**. ಇದರ ಅರ್ಥ ಹಣವನ್ನು ನೀಡುವುದು ಎಂದಲ್ಲ. ಅದು ಎಂದಿಗೂ ಹಾಗೆ ಅಲ್ಲವೇ ಅಲ್ಲ. ಇದರ ಅರ್ಥ ನೀವು ಏನಾಗಿದ್ದೀರೋ ಅದನ್ನು ಹಂಚಿಕೊಳ್ಳಿ. ನಿಮ್ಮ ಶಾಂತಿ, ನಿಮ್ಮ ಸಮಯ, ನಿಮ್ಮ ಜ್ಞಾನ, ಗಮನವನ್ನು ಹಂಚಿಕೊಳ್ಳಿ. ಹೇಗೆ ಕೇಳಬೇಕೆಂದು ತಿಳಿಯದೆ ಅದಕ್ಕಾಗಿ ಕಾಯುತ್ತಿರುವ ಯಾರೊಂದಿಗಾದರೂ ನಿಮ್ಮ ಉಪಸ್ಥಿತಿ ಯನ್ನು ಹಂಚಿಕೊಳ್ಳಿ.





ಉಪನಿಷತ್ತುಗಳು ವರ್ಷಗಳಿಂದ ನನ್ನೊಂದಿಗೆ ಸದಾ ಉಳಿದಿರುವ ಒಂದು ವಾಕ್ಯವನ್ನು ಒಳಗೊಂಡಿವೆ. **ಪೂರ್ಣಮದಃ ಪೂರ್ಣಮಿದಂ**. ಅದು ಸಂಪೂರ್ಣ. ಇದು ಸಂಪೂರ್ಣ. ಒಟ್ಟಾರೆಯಿಂದ, ಸಂಪೂರ್ಣ ವನ್ನು ತೆಗೆದುಕೊಂಡಾಗ, ಸಂಪೂರ್ಣ ಇನ್ನೂ ಉಳಿದಿದೆ. ಇದು ಇದುವರೆಗೆ ರಚಿಸಲಾದ ದಾನದ ಅತ್ಯಂತ ಸಂಕ್ಷಿಪ್ತ ವಿವರಣೆಯಾಗಿದೆ. ನೀವು ಹೃದಯಂತರಾಳದಿಂದ ನೀಡಿದಾಗ, ಏನನ್ನೂ ಕಳೆದುಕೊ ಳ್ಳುವುದಿಲ್ಲ. ಪೂರ್ಣತೆ ಮಾತ್ರವೇ ಉಳಿಯುತ್ತದೆ. ಒಂದು ಮೇಣದಬತ್ತಿ ಇನ್ನೊಂದನ್ನು ಬೆಳಗಿಸಿದಾಗ ಅದರ ಪ್ರಕಾಶಮಾನ ಕಡಿಮೆಯಾಗು ವುದಿಲ್ಲ. ಕೋಣೆ ಪ್ರಕಾಶಮಾನವಾಗುತ್ತದೆ. ಇದು ತತ್ವಶಾಸ್ತ್ರವಲ್ಲ. ಇದು ಭೌತಶಾಸ್ತ್ರ. ಇದು ಜೀವಶಾಸ್ತ್ರ. ಹಿಂದೆ ಮುಂದೆ ನೋಡದೆ ಲೆಕ್ಕಿಸದೆ ನೀಡಿ ನಿಮ್ಮಷ್ಟಕ್ಕೆ ನೀವಿರಿ. ಪ್ರಕಾಶಮಾನರಾಗಲು ಹಂಚಿಕೊಳ್ಳಿ.

**ಲೇಖಕರು: ಡಾ. ಅಚ್ಯುತ ಸಮಂತ**
**( ಕೆಐಐಟಿ, ಕೆಐಎಸ್‌ಎಸ್ ಮತ್ತು ಎಒಜಿ ಸ್ಥಾಪಕರು)**

### ಏಕರೂಪತೆ, ಸಮಾನತೆ, ಜಾತ್ಯತೀತತೆ ಕಾಯ್ದುಕೊಳ್ಳಲು ಸರ್ಕಾರದ ಮಹತ್ವದ ನಿರ್ಧಾರ

## ಬೊಮ್ಮಾಯಿ ಸರ್ಕಾರ ಹೊರಡಿಸಿದ್ದ ಹಿಜಾಬ್ ನಿಷೇಧ ಆದೇಶ ವಾಪಸ್ ಪಡೆದ ಕಾಂಗ್ರೆಸ್

**ಬೆಂಗಳೂರು, ಮೇ 13:** ರಾಜ್ಯದ ಶಾಲಾ–ಕಾಲೇಜುಗಳಲ್ಲಿ ಏಕರೂಪತೆ, ಸಮಾನತೆ ಮತ್ತು ಜಾತ್ಯತೀತತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಮಹತ್ವದ ನಿರ್ಧಾರ ತೆಗೆದುಕೊಂಡಿದೆ.

2022ರ ಫೆ.5ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಹಿಂದಿನ ಆದೇಶದಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಉಂಟಾದ ಗೊಂದಲಗಳ ಹಿನ್ನೆಲೆಯಲ್ಲಿ ಜಾರಿಗೆ ಬಂದಿತ್ತು. ಆ ಆದೇಶದ ಪ್ರಕಾರ, ವಿದ್ಯಾರ್ಥಿಗಳು ಆಡಳಿತ ಮಂಡಳಿ ನಿಗದಿಪಡಿಸಿದ ಸಮವಸ್ತ್ರವನ್ನೇ ಕಡ್ಡಾಯವಾಗಿ ಧರಿಸಬೇಕಿತ್ತು. ಆದರೆ, ಇದು ವಿವಿಧ ಧರ್ಮಗಳ ವಿದ್ಯಾರ್ಥಿಗಳ ಸಾಂಪ್ರದಾಯಿಕ ನಂಬಿಕೆಗಳಿಗೆ ಅಡ್ಡಿಯಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿತ್ತು. ಈ ಹಿನ್ನೆಲೆಯಲ್ಲಿ, ಶಿಸ್ತು ಮತ್ತು ವೈಯಕ್ತಿಕ ನಂಬಿಕೆಗಳ ನಡುವೆ ಸಮತೋಲನ ಸಾಧಿಸಲು ಸರ್ಕಾರವು ಹೊಸ ಆದೇಶವನ್ನು ಹೊರಡಿಸಿದೆ. ಸರ್ಕಾರವು ತನ್ನ ಹೊಸ ನಿರ್ದೇಶನಗಳಲ್ಲಿ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಿದೆ. ಸಮವಸ್ತ್ರ ಕಡ್ಡಾಯ: ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಸಮವಸ್ತ್ರವನ್ನು ನಿಗದಿಪಡಿಸುವ ಮತ್ತು ಕಡ್ಡಾಯಗೊಳಿಸುವ ಅಧಿಕಾರವನ್ನು ಮುಂದುವರಿಸಲಿವೆ.

ಸೀಮಿತ ಸಾಂಪ್ರದಾಯಿಕ ಗುರುತುಗಳಿಗೆ ಅವಕಾಶ: ವಿದ್ಯಾರ್ಥಿಗಳು ನಿಗದಿತ ಸಮವಸ್ತ್ರದ ಜೊತೆಗೆ ಪೂರಕವಾಗಿರುವ ಸೀಮಿತ ಸಾಂಪ್ರದಾಯಿಕ ಹಾಗೂ ನಂಬಿಕೆ ಆಧಾರಿತ ಗುರುತುಗಳನ್ನು ಧರಿಸಲು ಅನುಮತಿ ನೀಡಲಾಗಿದೆ. ಪೇಟ/ಜನಿವಾರ/ಪವಿತ್ರ ದಾರ, ಶಿವದಾರ, ರುದ್ರಾಕ್ಷಿ, ಹಾಗೂ ತಲೆವಸ್ತ್ರ/ಹಿಜಾಬ್ ನಂತಹ ಸಾಂಪ್ರದಾಯಿಕ ಸಂಕೇತಗಳನ್ನು ಧರಿಸಲು ಅವಕಾಶವಿದೆ.

**ನಿರ್ಬಂಧಗಳು:** ಈ ಸಾಂಪ್ರದಾಯಿಕ ಗುರುತುಗಳು ಸಮವಸ್ತ್ರದ ಮೂಲ ಉದ್ದೇಶವನ್ನು ವಿಫಲಗೊಳಿಸುವಂತಿರಬಾರದು. ಅಲ್ಲದೆ, ಇವು ಶಿಸ್ತು, ಸುರಕ್ಷತೆ ಮತ್ತು ವಿದ್ಯಾರ್ಥಿಯ ಗುರುತಿಸುವಿಕೆಗೆ ಅಡ್ಡಿಯಾಗಬಾರದು.

**ಶಿಕ್ಷಣದ ಹಕ್ಕು:** ಯಾವುದೇ ವಿದ್ಯಾರ್ಥಿಯು ಸಾಂಪ್ರದಾಯಿಕ ಗುರುತುಗಳನ್ನು ಧರಿಸಿದ್ದಾನೆ ಎಂಬ ಕಾರಣಕ್ಕಾಗಿ ಅವರಿಗೆ ತರಗತಿ ಅಥವಾ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನಿರಾಕರಿಸುವಂತಿಲ್ಲ.

ಶಿಕ್ಷಣ ಸಂಸ್ಥೆಗಳು ಕೇವಲ ಬೋಧನಾ ಕೇಂದ್ರಗಳಲ್ಲದೆ, ವೈಜ್ಞಾನಿಕತೆ, ಸಮಾನತೆ, ಭ್ರಾತೃತ್ವ ಮತ್ತು ಜಾತ್ಯತೀತ ಮೌಲ್ಯಗಳನ್ನು ಕಲಿಯುವ ಕೇಂದ್ರಗಳಾಗಿವೆ ಎಂದು ಸರ್ಕಾರ ಪ್ರತಿಪಾದಿಸಿದೆ. ಸಾಂವಿಧಾನಿಕ ಅರ್ಥದಲ್ಲಿ ಜಾತ್ಯತೀತತೆ ಎಂದರೆ ವೈಯಕ್ತಿಕ ನಂಬಿಕೆಗಳ ವಿರೋಧವಲ್ಲ, ಬದಲಾಗಿ ಎಲ್ಲರಿಗೂ ಸಮಾನ ಗೌರವ ಮತ್ತು ತಾರತಮ್ಯರಹಿತ ವರ್ತನೆಯಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (SDMC) ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಗಳು (CDC) ವಿದ್ಯಾರ್ಥಿಗಳ ಜೊತೆ ತಾರತಮ್ಯ ಅಥವಾ ಅವಮಾನಕಾರಿ ವರ್ತನೆ ಮಾಡದಂತೆ ಸೂಚಿಸಲಾಗಿದೆ.

ಬಸವಣ್ಣನವರ "ಇವ ನಮ್ಮವ" ಎಂಬ ಒಳಗೊಳ್ಳುವ ತತ್ವದಂತೆ ಶಿಸ್ತು ಕಾಪಾಡಿಕೊಳ್ಳಬೇಕು ಎಂದು ಸರ್ಕಾರ ನಿರ್ದೇಶಿಸಿದೆ.ಈ ಹೊಸ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದ್ದು, ಇದಕ್ಕೆ ವಿರುದ್ಧವಾಗಿರುವ ಯಾವುದೇ ಹಿಂದಿನ ಸುತ್ತೋಲೆ ಅಥವಾ ನಿಯಮಗಳು ಅಮಾನ್ಯವಾಗಲಿವೆ.

## ಪ್ರಧಾನಿ ಭೇಟಿ ವೇಳೆ ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣ: ತಮಿಳುನಾಡಿನಲ್ಲೂ ತನಿಖಾ ತಂಡದಿಂದ ಶೋಧ




**ಬೆಂಗಳೂರು, ಮೇ 13:** ಜಿಲೆಟಿನ್ ಕಡ್ಡಿಗಳನ್ನು ಇಟ್ಟವರ ಪತ್ತೆಗಾಗಿ ಒಂದು ತಂಡ ತಮಿಳುನಾಡಿಗೆ ತೆರಳಿ ಶೋಧ ನಡೆಸುತ್ತಿದೆ. ನಗರದ ಹೊರವಲಯದ ಕಗ್ಗಲಿಪುರದ ತಾತಗುಣಿ ಬಳಿಯ ವಡೇರಹಳ್ಳಿ ಗೇಟ್ ಸಮೀಪ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ತನಿಖಾ ತಂಡಗಳಿಗೆ ಹಲವಾರು ಅನುಮಾನಗಳು ವ್ಯಕ್ತವಾಗಿವೆ.

ಇದು ಕಾಕತಾಳೀಯವೇ ಅಥವಾ ಉದ್ದೇಶಪೂರ್ವಕವಾಗಿದೆಯೋ, ಇದರ ಹಿಂದೆ ಯಾವುದಾದರೂ ಸಂಚು ಅಡಗಿದೆಯೋ ಎಂಬ ನಿಟ್ಟಿನಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ನಡುವೆ ಕಂಟ್ರೋಲ್ ರೂಮ್‌ಗೆ ಬಾಂಬ್ ಬೆದರಿಕೆ ಕರೆ ಮಾಡಿ ಪೊಲೀಸರ ವಶದಲ್ಲಿರುವ ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ಲೋಹಿತ್‌ನನ್ನು ವಿಚಾರಣೆಗೆ ಒಳಪಡಿಸಿದಾಗ ಆತ ಒಂದು ದಿನ ತಮಿಳುನಾಡಿಗೆ ಹೋಗಿರುವುದು ಗೊತ್ತಾಗಿದೆ. ಆತ ಯಾವ ಉದ್ದೇಶಕ್ಕಾಗಿ ತಮಿಳುನಾಡಿಗೆ ಹೋಗಿದ್ದ. ಅಲ್ಲಿಂದ ಸ್ಫೋಟಕ ಏನಾದರೂ ತಂದಿದ್ದನೇ ಎಂಬ ಬಗ್ಗೆಯೂ ಪೊಲೀಸರು ಮಾಹಿತಿಗಳನ್ನು ಕಲೆಹಾಕುತ್ತಿದ್ದಾರೆ. ತಮಿಳುನಾಡಿನಲ್ಲಿ ಜಿಲೆಟಿನ್ ಕಡ್ಡಿ ತಯಾರಿಕೆಯ ಕಾರ್ಖಾನೆಗಳು ಹೆಚ್ಚು ಇವೆ. ತನಿಖಾ ತಂಡ ಅಲ್ಲಿನ ಕಾರ್ಖಾನೆಗಳಿಗೂ ಭೇಟಿ ನೀಡಿ, ಜಿಲೆಟಿನ್ ಕಡ್ಡಿ ತಯಾರಿಸುವವರು ಹಾಗೂ ಮಾರಾಟಗಾರರ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದೆ. ಹೊರವಲಯದಲ್ಲಿ ಸಿಕ್ಕಿರುವ ಜಿಲೆಟಿನ್ ಕಡ್ಡಿಗಳು ಸುಮಾರು 2 ವರ್ಷಕಿಂತಲೂ ಹಳೆಯವು. ಒಂದು ವೇಳೆ ಅದನ್ನು ಸ್ಫೋಟಿಸಿದರೂ ಹೆಚ್ಚು ಹಾನಿ ಉಂಟು ಮಾಡುವ ಸಾಮರ್ಥ್ಯ ಕಳೆದುಕೊಂಡಿರುತ್ತವೆ. ಎಂಬುವುದು ಗೊತ್ತಾಗಿದೆ. ಒಂದು ವೇಳೆ ಕ್ವಾರಿಗಳಲ್ಲಿ ಕೆಲಸ ಮಾಡುವವರು ಏನಾದರೂ ಬಳಕೆಗೆ ಬರುವುದಿಲ್ಲವೆಂದು ಈ ಸ್ಥಳದಲ್ಲಿ ಇಟ್ಟು ಹೋಗಿರಬಹುದೆಂಬ ಬಗ್ಗೆಯೂ ಸಹ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಒಟ್ಟಾರೆ ಜಿಲೆಟಿನ್ ಕಡ್ಡಿ ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಬಂದ ದಿನವೇ ಪತ್ತೆಯಾಗಿರುವುದರಿಂದ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸರು ವಿವಿಧ ದೃಷ್ಟಿಕೋನಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

### ಐಪಿಎಲ್-2025 ವಿಜಯೋತ್ಸವ ವೇಳೆ ಕಾಲ್ತುಳಿತ ಪ್ರಕರಣ

## ಡಿಎನ್‌ಎ ಸಂಸ್ಥೆಯ ಇಬ್ಬರು ಅಧಿಕಾರಿಗಳ ವಿದೇಶ ಪ್ರವಾಸಕ್ಕೆ ಹೈಕೋರ್ಟ್ ಅನುಮತಿ




**ಬೆಂಗಳೂರು, ಮೇ 13:** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ರ ವಿಜಯೋತ್ಸವದ ವೇಳೆ ಬೆಂಗಳೂರು ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂ ಗಣದ ಮುಂಭಾಗ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್‌ನ ಇಬ್ಬರು ಅಧಿಕಾರಿಗಳಿಗೆ ಬ್ರೆಜಿಲ್‌ನ ರಿಯೋ–ಡಿ–ಜನೈರೊಗೆ ಪ್ರಯಾಣಿಸಲು ಹೈಕೋರ್ಟ್ ಅನುಮತಿ ನೀಡಿದೆ.

ಡಿಎನ್‌ಎ ಕಂಪನಿಯ ನಿರ್ದೇಶಕ ಸುನಿಲ್ ಮ್ಯಾಥ್ಯೂ ಮತ್ತು ಸೀನಿಯರ್ ಇವೆಂಟ್ ಮ್ಯಾನೇಜರ್ ಎಸ್. ಕಿರಣ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ನ್ಯಾಯಪೀಠ, ಜೂನ್ 1 ರಿಂದ ಜೂನ್ 10 ರವರೆಗೆ ಬ್ರೆಜಿಲ್ ಪ್ರವಾಸ ಕೈಗೊಳ್ಳುವುದಕ್ಕೆ ಅನುಮತಿ ನೀಡಿ ಮಧ್ಯಂತರ ಆದೇಶ ಹೊರಡಿಸಿದೆ.

ವ್ಯವಹಾರದ ಉದ್ದೇಶಕ್ಕಾಗಿ ವಿದೇಶಕ್ಕೆ ತೆರಳಬೇಕಿರುವುದರಿಂದ ವಿಚಾರಣಾ ನ್ಯಾಯಾಲಯದಲ್ಲಿರುವ ಅವರ ಪಾಸ್‌ಪೋರ್ಟ್‌ಗಳನ್ನು ಬಿಡುಗಡೆ ಮಾಡಬೇಕು ಎಂದು ವಿಚಾರಣಾ ನ್ಯಾಯಾಲಯಕ್ಕೆ ಸೂಚನೆ ನೀಡಿರುವ ನ್ಯಾಯಪೀಠ, ಜೂನ್ 12 ರೊಳಗೆ ಬೆಂಗಳೂರಿಗೆ ಹಿಂದಿರುಗಬೇಕು ಎಂದು ನಿರ್ದೇಶನ ನೀಡಿದೆ.

## ಪ್ರಚೋದನಾಕಾರಿ ಹೇಳಿಕೆ: ಚಕ್ರವರ್ತಿ ಸೂಲಿಬೆಲೆ ಪ್ರಕರಣಕ್ಕೆ ಹೈಕೋರ್ಟ್ ತಡೆ

**ಬೆಂಗಳೂರು, ಮೇ 13:** ಮುಸಲ್ಮಾನ್ ಹುಡುಗಿಯರು ಗಂಡಸರಿಗಿಂತ ಅಪಾಯಕಾರಿ. ಮುಸ್ಲಿಮ್ ಹುಡುಗರ ಸ್ನೇಹ ಮಾಡಿದರೂ ಪರವಾಗಿಲ್ಲ, ಮುಸ್ಲಿಮ್ ಹೆಣ್ಣು ಮಕ್ಕಳ ಸ್ನೇಹ ಮಾಡಲೇಬೇಡಿ ಎಂದು ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಸಂಬಂಧ ಚಕ್ರವರ್ತಿ ಸೂಲಿಬೆಲೆ ಅಲಿಯಾಸ್ ಮಿಥುನ್ ಚಕ್ರವರ್ತಿ ದೇವಿದಾಸ್ ಶೇಟ್ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಹೈಕೋರ್ಟ್‌ನ ಧಾರವಾಡ ಪೀಠ ಈಚೆಗೆ ತಡೆ ನೀಡಿದೆ.

ಧಾರವಾಡ ನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ತಡೆ ನೀಡುವಂತೆ ಕೋರಿ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಂಜೀವ್‌ಕುಮಾರ್ ಹಂಚಾಟೆ ಅವರ ರಜಾಕಾಲೀನ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಪ್ರಕರಣವನ್ನು ವಿಸ್ತೃತವಾಗಿ ಪರಿಗಣಿಸುವ ಅಗತ್ಯವಿದೆ. ಮೇಲ್ನೋಟಕ್ಕೆ ತಡೆ ನೀಡುವ ಪ್ರಕರಣ ಇದಾಗಿರುವುದರಿಂದ



ಪ್ರಕರಣಕ್ಕೆ ತಡೆ ನೀಡಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ.

ಸೂಲಿಬೆಲೆ ಪ್ರತಿನಿಧಿಸಿದ್ದ ಹಿರಿಯ ವಕೀಲ ಎಂ ಅರುಣ್ ಶ್ಯಾಮ್ ಅವರು, ಪೊಲೀಸ್ ಪೇದೆ ದೂರು ನೀಡಿದ್ದು, ಅವರು ಸಂತ್ರಸ್ತರಲ್ಲದಿರುವುದರಿಂದ ದೂರು ನೀಡುವ ಯಾವುದೇ ಹಕ್ಕು ಅವರಿಗೆ ಇಲ್ಲ. ಚಕ್ರವರ್ತಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದು ಸಂವಿಧಾನದ 19ನೇ ವಿಧಿಯ ವ್ಯಾಪ್ತಿಗೆ ಬರುತ್ತದೆ. ಹಾಲಿ ಪ್ರಕರಣಕ್ಕೆ ಬಿಎನ್‌ಎಸ್ ಸೆಕ್ಷನ್ 196 ಅನ್ವಯಿಸುವುದಿಲ್ಲ ಎಂದಿದ್ದರು.

**ಪ್ರಕರಣದ ಹಿನ್ನೆಲೆ:** 2026ರ ಏಪ್ರಿಲ್ 8ರಂದು ಧಾರವಾಡದ ಸುಭಾಷ್ ರಸ್ತೆಯಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಚಕ್ರವರ್ತಿ ಸೂಲಿಬೆಲೆ ಅವರು ಮುಸಲ್ಮಾನ್ ಹುಡುಗಿಯರು ಗಂಡಸರಿಗಿಂತ ಡೇಂಜರ್. ಮುಸ್ಲಿಮ್ ಹುಡುಗರ ಸ್ನೇಹ ಮಾಡಿದರೂ ಪರವಾಗಿಲ್ಲ, ಮುಸ್ಲಿಮ್ ಹೆಣ್ಣು ಮಕ್ಕಳ ಸ್ನೇಹ ಮಾಡಲೇಬೇಡಿ ಎಂದು ಮನೆಯಲ್ಲಿ ನಮ್ಮ ಹೆಣ್ಣು ಮಕ್ಕಳಿಗೆ ಹೇಳಿಕೊಡಿ. ಮುಸ್ಲಿಮ್ ಸ್ನೇಹಿತೆ ಪದೇಪದೇ ಮನೆಗೆ ಕರೆದಳು ಎಂದು ನಮ್ಮ ಹೆಣ್ಣು ಮಕ್ಕಳು ಹಾಳಾಗಿ ಹೋಗಲಿ ಎಂದು ಅವರ ಮನೆಗೆ ಹೋದಾಗ ಕುಡಿಯುವ ನೀರಿಗೆ ಏನೋ ಮತ್ತು ಬರುವ ಅಂಶ ಹಾಕಿ ಕೊಟ್ಟು ರಾಕ್ಷಸರಂತಿರುವ ತನ್ನ ಅಣ್ಣ ತಮ್ಮಂದಿರ ಕಡೆಗೆ ಕೊಟ್ಟು ವಿಡಿಯೊ ಕಳಿಸಿದ್ರೆ ಹೆಣ್ಣುಮಕ್ಕಳ ಕತೆ ಸಮುಗಿತು. ಅವರಿಗೆ ಜೀವನವೇ ಇರೋದಿಲ್ಲ ಎಂದು ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಸಂಬಂಧ ಧಾರವಾಡ ಟೌನ್ ಪೊಲೀಸರು ಸ್ವಯಂಪ್ರೇರಿತವಾಗಿ ಬಿಎನ್‌ಎಸ್ ಸೆಕ್ಷನ್ 196(1) ಅಡಿ ಪ್ರಕರಣ ದಾಖಲಿಸಿದ್ದರು.



ಬೆಂಗಳೂರಿನ ವಿಧಾನಸೌಧದಲ್ಲಿ ಬುಧವಾರ ಭದ್ರತಾ ಸನ್ನದ್ಧತೆಯನ್ನು ಬಲಪಡಿಸುವ ಉದ್ದೇಶದಿಂದ ಎನ್‌ಎಸ್‌ಜಿ ಕಮಾಂಡೋಗಳು ಮತ್ತು ಕರ್ನಾಟಕ ಪೊಲೀಸರು ಭಯೋತ್ಪಾದನಾ ನಿಗ್ರಹ ಅಣಕು ತಾಲೀಮು ನಡೆಸಿದರು.

### ಸರ್ಕಾರದ ಆದೇಶಕ್ಕೆ ಸಾರಿಗೆ ನಿಗಮಗಳ ಜಂಟಿ ಕ್ರಿಯಾಸಮಿತಿ ವಿರೋಧ

## ಶೇ.25ರಷ್ಟು ವೇತನ ಪರಿಷ್ಕರಣೆಗೆ ಪಟ್ಟು, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ

**ಬೆಂಗಳೂರು, ಮೇ 13:** ಸರ್ಕಾರದ ವೇತನ ಪರಿಷ್ಕರಣೆಯ ಆದೇಶಕ್ಕೆ ಜಗ್ಗದ ಸಾರಿಗೆ ನೌಕರರು ಮೇ 20ರಿಂದ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಸಾರಿಗೆ ಮುಷ್ಕರ ನಡೆಸಲು ಮುಂದಾಗಿದ್ದಾರೆ.

ಕಳೆದ ಎರಡೂವರೆ ವರ್ಷಗಳಿಂದ ನಡೆದ ನಿರಂತರ ಮಾತುಕತೆಗಳ ಫಲಿತಾಂಶದ ಭಾಗವಾಗಿ ಮಂಗಳವಾರ ಸಂಜೆ ರಾಜ್ಯಸರ್ಕಾರ ಸಾರಿಗೆ ನಿಗಮಗಳ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಶೇ.12.5ರಷ್ಟು ವೇತನವನ್ನು ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿದೆ.

2025ರ ಮಾರ್ಚ್ 31ರಿಂದ ಇದು ಪೂರ್ವಾನುವಯಗೊಳ್ಳಲಿದೆ ಎಂದು ಸರ್ಕಾರ ತಿಳಿಸಿದೆ. ಆದರೆ ಶೇ.25ರಷ್ಟು ವೇತನ ಪರಿಷ್ಕರಣೆ ಯಾಗಬೇಕು ಎಂಬುದೂ ಸೇರಿ ಮೂರು ಪ್ರಮುಖ ಬೇಡಿಕೆಗಳನ್ನು ಮಂಡಿಸಿರುವ ಸಾರಿಗೆ ನಿಗಮಗಳ ಜಂಟಿ ಕ್ರಿಯಾಸಮಿತಿ ಸರ್ಕಾರದ ಆದೇಶಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

2024ರ ಜನವರಿ ಒಂದರಿಂದ 4 ವರ್ಷಗಳ ಅವಧಿಗೆ ಮೂಲ ವೇತನದೊಂದಿಗೆ ಶೇ.25ರಷ್ಟು ಹೆಚ್ಚಳ ಮಾಡಬೇಕು ಎಂಬುದು ಸಾರಿಗೆ ಸಂಸ್ಥೆಗಳ ಜಂಟಿಕ್ರಿಯಾ ಸಮಿತಿಯ ಪ್ರಮುಖ ಬೇಡಿಕೆಯಾಗಿತ್ತು. ಆದರೆ ಯಾವುದೇ ಚರ್ಚೆ ನಡೆಸದೇ ಏಕಪಕ್ಷೀಯವಾಗಿ 2025ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಶೇ. 12.5ರಷ್ಟು ವೇತನವನ್ನು ಪರಿಷ್ಕರಣೆ ಮಾಡಲಾಗಿದೆ. ಇದು ಸಮತವಲ್ಲ ಎಂದು ನೌಕರರ ಜಂಟಿಕ್ರಿಯಾ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ (ಎಐಟಿಯುಸಿ) ಅಧ್ಯಕ್ಷೆ ಜ್ಯೋತಿ ಅನಂತ ಸುಬ್ಬರಾವ್, ಸರ್ಕಾರ ಕಾರ್ಮಿಕರಿಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಡದೇ ಮೇ 20ರಂದು ತುಮಕೂರಿನಲ್ಲಿ ಸಾಧನಾ ಸಮಾವೇಶ ಮಾಡಲು ಮುಂದಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಕೋವಿಡ್ ಸಮಯದಲ್ಲೇ ಶೇ.15ರಷ್ಟು ವೇತನ ಹೆಚ್ಚಳವಾಗಿತ್ತು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ವೇತನ ಹೆಚ್ಚಿಸಬೇಕು ಎಂಬ ನಿಯಮವನ್ನು ಸರ್ಕಾರ ಉಲ್ಲಂಘನೆ ಮಾಡುತ್ತಿದೆ. ಶೇ. 12ರಷ್ಟು ವೇತನ ಹೆಚ್ಚಳ ಪ್ರಸ್ತುತ ದಿನಮಾನಗಳಲ್ಲಿನ ಕಾರ್ಮಿಕರ ಜೀವನ ನಿರ್ವಹಣೆಗೆ ಸಾಲುವುದಿಲ್ಲ ಎಂದು ಹೇಳಿದ್ದಾರೆ.

ಹಲವು ಬೇಡಿಕೆಗಳನ್ನು ಕಡೆಗಣಿಸಿ ಏಕಾಏಕಿ ಆದೇಶ ಹೊರಡಿಸಲಾಗಿದೆ, ಇದು ಸರಿಯಲ್ಲ. ನಮ್ಮ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಮೇ 20ರಿಂದ ನಾಲ್ಕು ಸಾರಿಗೆ ನಿಗಮಗಳ ಸಿಬ್ಬಂದಿ, ಕಾರ್ಮಿಕರು ಮತ್ತು ಕಾರ್ಯಾಗಾರಗಳಲ್ಲಿನ ಸಿಬ್ಬಂದಿ ಕೂಡ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ. ಸರ್ಕಾರ ಹೋರಾಟ ಹತ್ತಿಕ್ಕಲು ಎಸ್ಮಾದಂತಹ ಕಾನೂನು ಜಾರಿ ಮಾಡಿದರೂ ನೌಕರರು ಜಗ್ಗುವುದಿಲ್ಲ. ಬೇರೆಯೇ ರೀತಿಯ ಪರಿಣಾಮವನ್ನು ಸರ್ಕಾರ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

### ಗ್ಯಾರಂಟಿ ಸರ್ಕಾರದಲ್ಲಿ ಜನರ ರಕ್ಷಣೆಗೆ ಗ್ಯಾರಂಟಿಯೇನು?

## ಪೊಲೀಸ್ ಇಲಾಖೆಯಲ್ಲಿ ಶಿಸ್ತು, ನೈತಿಕತೆ ಮಾಯ, ಭ್ರಷ್ಟಾಚಾರದ ಮೇಲಾಟ: ಆರ್.ಅಶೋಕ್ ಗಂಭೀರ ಆರೋಪ

**ಬೆಂಗಳೂರು, ಮೇ 13:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪೊಲೀಸ್ ಇಲಾಖೆ ಶಿಸ್ತು ನೈತಿಕತೆ ಮತ್ತು ಜನರ ವಿಶ್ವಾಸ ಕಳೆದುಕೊಂಡು ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.ಕಾಂಗ್ರೆಸ್ ಸರ್ಕಾರದ ವಿರುದ್ಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸಿದ್ದರಾಮಯ್ಯನವರೇ ಗ್ಯಾರಂಟಿ ಸರ್ಕಾರದಲ್ಲಿ ರಾಜ್ಯದ ಜನರಿಗೆ ಜೀವ ಆಸ್ತಿ ಮತ್ತು ಮಾನದ ರಕ್ಷಣೆಗಾಗಿ ಗ್ಯಾರಂಟಿ ನೀಡುವವರು ಯಾರು ಎಂದು ಪ್ರಶ್ನೆ ಮಾಡಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ರಕ್ಷಕರೇ ಭಕ್ಷಕರಾಗಿದ್ದಾರೆ. ಪೊಲೀಸ್ ಇಲಾಖೆ ಕುರಿತಂತೆ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಕಿ ಅಂಶಗಳು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಬೆಚ್ಚಿಬೀಳಿಸುವ ಸತ್ಯವನ್ನು ಬಯಲಿಗೆ ಎಳೆದಿವೆ ಎಂದು ಆತಂಕ ಹೊರಹಾಕಿದ್ದಾರೆ.

ಕೇವಲ ಎರಡು ವರ್ಷಗಳಲ್ಲಿ 713 ಪೊಲೀಸ್ ಅಧಿಕಾರಿಗಳ ಅಮಾನತುಪಡಿಸಲಾಗಿದೆ. ಇಷ್ಟು ದೊಡ್ಡ ಸಂಖ್ಯೆಯ ಅಮಾನತುಗಳು ಎಂದರೆ ಇದು ಯಾರೋ ಕೆಲವರ ವೈಯಕ್ತಿಕ ತಪ್ಪಲ್ಲ, ಸಂಪೂರ್ಣ ವ್ಯವಸ್ಥೆಯೇ ಕುಸಿದುಬಿದ್ದಿದೆ ಎಂಬುದಕ್ಕೆ ಸಾಕ್ಷಿ. ಗಂಭೀರ ಅಪರಾಧಗಳಲ್ಲಿ 95 ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಸಾಮಾನ್ಯ ನಾಗರಿಕರು ಯಾರನ್ನು ನಂಬಬೇಕು. ಸುರಕ್ಷತೆಯ ಸಂಕೇತವಾಗಿರಬೇಕಾದ ಖಾಕಿ, ಇಂದು ಭಯ ಮತ್ತು ಅನುಮಾನಗಳ ಪ್ರತೀಕ'ವಾಗುತ್ತಿರುವುದೇಕೆ ಎಂದು ಪ್ರಶ್ನಿಸಿದ್ದಾರೆ.

ದರೋಡೆ, ಕಳ್ಳತನ, ಕೊಲೆ ಆರೋಪಗಳಲ್ಲೂ ಪೊಲೀಸರ ಹೆಸರುಗಳು ಕೇಳಿಬಂದಿವೆ. ಇದು ಕೇಳುವುದಕ್ಕೂ ನಾಚಿಕೆಯಾಗುತ್ತದೆ. ಕಾನೂನು ಜಾರಿ ಮಾಡಬೇಕಾದವರೇ ಕಾನೂನನ್ನು ಗಾಳಿಗೆ ತೂರಿ ಉಲ್ಲಂಘಿಸಲು ಆರಂಭಿಸಿದರೆ ರಾಜ್ಯದಲ್ಲಿ ನ್ಯಾಯ ಹೇಗೆ ಉಳಿಯುತ್ತದೆ? ಅಮಾನತುಗೊಂಡವರಲ್ಲಿ ಬಹುಪಾಲು ಅಧಿಕಾರಿಗಳು ಬೆಂಗಳೂರಿನವರೇ ಎಂಬ ಸಂಗತಿ ಆತಂಕಕಾರಿ. ದೇಶದ ತಂತ್ರಜ್ಞಾನ ರಾಜಧಾನಿ ಎಂದು ಹೆಮ್ಮೆಪಡುವ ನಗರದಲ್ಲಿ ಕಾನೂನು ಸುವ್ಯವಸ್ಥೆ ಈ ಮಟ್ಟಿಗೆ ಹದಗೆಟ್ಟರೆ ಬೆಂಗಳೂರಿನ ಬ್ರ್ಯಾಂಡ್ ವ್ಯಾಲ್ಯೂ, ವರ್ಚಸ್ಸಿಗೆ ಧಕ್ಕೆಯಾಗುವುದಿಲ್ಲವೇ ಎಂದು ಸರ್ಕಾರವನ್ನು ತರಾಟೆಗೆತಗೆದುಕೊಂಡಿದ್ದಾರೆ.

400ಕ್ಕೂ ಹೆಚ್ಚು ಅಧಿಕಾರಿಗಳು ತಪ್ಪಿತಸ್ಥರೆಂದು ಸಾಬೀತಾಗಿದೆ. ಇದು ಕೇವಲ ಆರೋಪಗಳ ಹಂತದಲ್ಲಿಲ್ಲ. ವಿಭಾಗೀಯ ತನಿಖೆಗಳಲ್ಲೇ ತಪ್ಪಿತಸ್ಥರೆಂದು ಸಾಬೀತಾದರೂ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ. ಇಂದು ಜನರಲ್ಲಿ ಮೂಡಿರುವ ಭಯ ಏನೆಂದರೆ, ರೌಡಿಶೀಟರ್‌ಗಳ ಜೊತೆ ಕೈಜೋಡಿಸುವವರು, ನಕಲಿ ದಾಖಲೆಗಳ ಜಾಲ ನಡೆಸುವವರು, ಅಮಾಯಕರ ಮೇಲೆ ದೌರ್ಜನ್ಯ ಎಸಗುವವರು ಕಾನೂನಿನ ಭಯವಿಲ್ಲದೆ ಸಂಚರಿಸುತ್ತಿದ್ದಾರೆ ಎಂಬುದು. ಇದು ಕೇವಲ ಪೊಲೀಸ್ ಇಲಾಖೆಯ ವೈಫಲ್ಯವಲ್ಲ, ಇದು ಗೃಹ ಇಲಾಖೆಯ ಸಂಪೂರ್ಣ ದಿವಾಳಿತನ ಎಂದು ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಖಾಕಿಯ ಮೇಲಿನ ಜನರ ನಂಬಿಕೆಯನ್ನು ನಾಶಮಾಡಿದ ಈ ವ್ಯವಸ್ಥೆಯನ್ನು ತಕ್ಷಣವೇ ಶುದ್ಧೀಕರಿಸಬೇಕು. ಇಲ್ಲದಿದ್ದರೆ ಕರ್ನಾಟಕದ ಜನರ ಆಕ್ರೋಶವೇ ಈ ಸರ್ಕಾರವನ್ನು ಅಧಿಕಾರದ ಕುರ್ಚಿಯಿಂದ ಕೆಳಗಿಳಿಸುವ ದಿನ ದೂರವಿಲ್ಲ ಎಂದು ಅಶೋಕ್ ಎಚ್ಚರಿಕೆ ನೀಡಿದ್ದಾರೆ.



## ಮೆಟ್ರೋದಲ್ಲಿ ಪ್ರಯಾಣಿಸುವೆ: ಮೋದಿ ಮಿತವ್ಯಯ ಸಲಹೆ ಪಾಲನೆಗೆ ಮುಂದಾದ ಅಶೋಕ್

ಇಂಧನ ಉಳಿತಾಯಕ್ಕೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿಯವರ ಸಲಹೆಯನ್ನು ಪಾಲಿಸಲು ಮುಂದಾಗಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ್, ಮೆಟ್ರೋದಲ್ಲಿ ಪ್ರಯಾಣಿಸುವುದಾಗಿ ತಿಳಿಸಿದ್ದಾರೆ. ಪ್ರಧಾನಿ ಮೋದಿಯವರ ಕರೆಗೆ ಸಂಪೂರ್ಣ ಬೆಂಬಲ ನೀಡುತ್ತೇವೆ. ನನ್ನ ಬೆಂಗಾವಲು ವಾಹನಗಳ ಬಳಕೆಯನ್ನು ಶೇ.30ರಿಂದ 40ರಷ್ಟು ಕಡಿತಗೊಳಿಸಲು ನಿರ್ಧರಿಸಿದ್ದೇನೆ. ಮದುವೆಗಳಂತಹ ಸಮಾರಂಭಗಳಿಗೆ ಹೋದಾಗ ಎಲ್ಲಾ ವಾಹನಗಳನ್ನು ಬಳಸುವುದಿಲ್ಲ. ಅಷ್ಟೇ ಅಲ್ಲದೆ, ವಾರದಲ್ಲಿ ಒಂದೆರಡು ದಿನ ಮೆಟ್ರೋದಲ್ಲಿ ಸಂಚರಿಸುವುದಾಗಿ ಅಶೋಕ್ ತಿಳಿಸಿದ್ದಾರೆ.

ನಾನು ಸಾರಿಗೆ ಸಚಿವರಾಗಿದ್ದ ಕಾಲದಲ್ಲಿ ಬಸ್ ಡೇ ಯೋಜನೆಯನ್ನು ಜಾರಿಗೆ ತಂದಿದ್ದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಕೂಡ ಈ ಮಾದರಿಯನ್ನು ಅನುಸರಿಸಬೇಕು ಎಂದು ಹೇಳಿದರು. ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ವಾರಕ್ಕೊಮ್ಮೆ ಕಡ್ಡಾಯವಾಗಿ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವಂತೆ ನಿಯಮ ರೂಪಿಸಲು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯುವುದಾಗಿ ಅವರು ತಿಳಿಸಿದ್ದಾರೆ.

## ಸೈಬರ್ ಅಪರಾಧಗಳ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಾಗಾರ



**ಬೆಂಗಳೂರು, ಮೇ 13:** ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಸಹಯೋಗದಲ್ಲಿ ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಕಾನೂನುಗಳ ರಕ್ಷಣೆ ಕುರಿತು ಬುಧವಾರ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಮಾತನಾಡಿದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಡಾ.ಸಿ.ವಿ. ಸ್ನೇಹಾ ಮಾತನಾಡಿ, ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗೆ ಪೋಕ್ಸೋ ಕಾಯ್ದೆಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಬಾಲ್ಯ ವಿವಾಹ, ಬಾಲಕಾರ್ಮಿಕತೆ, ಮಕ್ಕಳ ಕಳ್ಳಸಾಗಣೆ ಹಾಗೂ ಸೈಬರ್ ಅಪರಾಧಗಳ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು. ಮಕ್ಕಳ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಮತ್ತು ಸಮಾಜದ ಪಾತ್ರದ ಬಗ್ಗೆ ವಿಶೇಷವಾಗಿ ತಿಳಿಸಲಾಯಿತು.

ವಿವಿ ಕುಲಪತಿ ಪ್ರೊ. ರಮೇಶ್ ಬಿ. ವಿದ್ಯಾರ್ಥಿಗಳನ್ನು ಉದ್ದೇಶಿ ಮಾತನಾಡಿ, ಮಕ್ಕಳ ಹಕ್ಕುಗಳು, ಮಕ್ಕಳ ಕಾನೂನುಗಳ ರಕ್ಷಣೆ ವಿದ್ಯಾರ್ಥಿಗಳ ಜವಾಬ್ದಾರಿ, ಪಾತ್ರ ಬಾಲಗರ್ಭಿಣಿ, ಬಾಲ್ಯ ವಿವಾಹ, ಸೈಬರ್ ಪ್ರಕಣಗಳು ಹಾಗೂ ಮಕ್ಕಳ ಮೇಲಿನ ದೌರ್ಜನ್ಯದ ದತ್ತಾಂಶಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಎನ್ಫೋಲ್ಡ್ ಸಂಸ್ಥೆ ನಿರ್ದೇಶಕ ಖುಷಿ ಕುಶಾಲಪ್ಪ ಮಾತನಾಡಿ, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ– 2012ರ ಕುರಿತು ವಿವರಣೆ ಹಾಗೂ ಪೋಕ್ಸೋ ಪ್ರಕರಣ ತಡೆ ಕುರಿತಂತೆ ವಿದ್ಯಾರ್ಥಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ತರಬೇತಿ ನೀಡಿದರು.

ಮಕ್ಕಳ ಕಲ್ಯಾಣ ಸಮಿತಿ ಮಾಜಿ ಅಧ್ಯಕ್ಷೆ ಮೀನಾ ಜೈನ್ ರವರು ಬಾಲನ್ಯಾಯ ಕಾಯ್ದೆ – 2015, (ತಿದ್ದುಪಡಿ –2021) ಮಕ್ಕಳ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮತ್ತು ಜವಾಬ್ದಾರಿ"ಕುರಿತಂತೆ ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರೊ.ರಿತಿಕಾ ಸಿನ್ಹಾ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಮಾಜ ಕಾರ್ಯ ಅಧ್ಯಯನ ಹಾಗೂ ಸಂಶೋಧನ ವಿಭಾಗ, ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು, ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ಹಾಗೂ ಸಂಶೋಧನ ವಿಭಾಗದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರು, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ವಿದ್ಯಾವಿಷಯಕ ಪರಿಷತ್ ಸದಸ್ಯರು ಉಪಸ್ಥಿತರಿದ್ದರು.

## ಅಧ್ಯಯನವಿಲ್ಲದ ಯೋಜನೆಗಳನ್ನು ಕೂಡಲೇ ಕೈಬಿಡಿ: ದೂರದೃಷ್ಟಿಯಿಲ್ಲದ ಡಬಲ್ ಡೆಕ್ಕರ್ ಯೋಜನೆಗೆ ಸಂಸದ ತೇಜಸ್ವಿ ಸೂರ್ಯ ವಿರೋಧ

**ಸುರಂಗ ರಸ್ತೆ, ಮೇಲ್ಸೇತುವೆಗೆ ಬದಲಾಗಿ ಕೊನೇ ಹಂತದವರೆಗೆ ಸಂಪರ್ಕ ಸಾಧಿಸುವ ಕಡೆಗೆ ಗಮನಹರಿಸುವಂತೆ ಸಲಹೆ**

**ಬೆಂಗಳೂರು, ಮೇ 13:** ರಾಜಧಾನಿ ನಿವಾಸಿಗಳ ನೆಮ್ಮದಿ ಹಾಳು ಮಾಡಲೆಂದೇ, ದೂರದೃಷ್ಟಿ ಇಲ್ಲದ ಈ 'ಡಬಲ್ ಡೆಕ್ಕರ್'ನಂತಹ ಯೋಜನೆಗಳನ್ನು ಕೂಡಲೇ ಕೈಬಿಡಿ ಎಂದು ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ಸರಿಯಾದ ಅಧ್ಯಯನವಿಲ್ಲದೇ ಮಾಡಿದ ಈ ಎಡವಟ್ಟಿನಿಂದಾಗಿ ಸುಂದರವಾಗಿದ್ದ ಜಯನಗರ ಇಂದು ಸಂಚಾರದಟ್ಟಣೆಯ ನರಕವಾಗಿದೆ.

ಜನರ ತೆರಿಗೆ ಹಣದಲ್ಲಿ ನಡೆಯುವ ಇಂತಹ ಸರ್ಕಸ್ ನಿಲ್ಲಿಸಿ. ಬಿಲ್ಡರ್ – ಕಾಂಟ್ರಾಕ್ಟರ್ ಲಾಬಿಗೆ ಮಣಿದು ಸುರಂಗ ರಸ್ತೆ, ಮೇಲ್ಸೇತುವೆಗಳ ಮೇಲೆ ಕೋಟಿ ಸುರಿಯುವ ಬದಲು, ಕೊನೆ ಹಂತದವರೆಗೆ ಸಂಪರ್ಕ ಸಾಧಿಸುವ ಕಡೆಗೆ ಗಮನ ಹರಿಸಿ ಎಂದು ಆಗ್ರಹಿಸಿದ್ದಾರೆ.

ನಿಮ್ಮ ಅವೈಜ್ಞಾನಿಕ ಪ್ರಯೋಗಗಳಿಗೆ ಬೆಂಗಳೂರನ್ನು ಬಲಿಗೊಡಬೇಡಿ ಡಿ.ಕೆ.ಶಿವಕುಮಾರ್ ಅವರೇ. ಕೋಟಿ ಕೋಟಿ ಖರ್ಚು ಮಾಡಿ ಕಟ್ಟಿದ ರಾಗಿಗುಡ್ಡ ಫ್ಲೈಓವರ್ ಈಗ ವಾಹನಗಳ ಪ್ರದರ್ಶನ ಮಳಿಗೆಯಾಗಿದೆ.

ಯೋಜನೆಯ ರೂಪರೇಷೆ ಸಿದ್ಧ ಪಡಿಸುವಾಗ ಇಂಜಿನಿಯರ್‌ಗಳ ತರ್ಕ ಎಲ್ಲಿ ಹೋಗಿತ್ತು? ಅಗಲವಾದ ಮೇಲ್ಸೇತುವೆಯಿಂದ ಬರುವ ವಾಹನಗಳು ಕಿರಿದಾದ ಪ್ರವೇಶ/ನಿರ್ಗಮನ ದಾರಿಗಳಲ್ಲಿ ನುಗ್ಗುವಾಗ



ಟ್ರಾಫಿಕ್ ಜಾಮ್ ಆಗುತ್ತದೆ (ಬಾಟಲ್ ನೆಕ್ ಎಫೆಕ್ಟ್) ಎಂಬ ಕನಿಷ್ಠ ಜ್ಞಾನ ಇರಲಿಲ್ಲವೇ. ಇದು ವೈಜ್ಞಾನಿಕ ಯೋಜನೆಯೋ ಅಥವಾ ಕೇವಲ ಗುತ್ತಿಗೆದಾರರ ಲಾಭಕ್ಕೋ ಎಂದು ಪ್ರಶ್ನಿಸಿದ್ದಾರೆ.

ರಸ್ತೆ ಅಗಲ ಮಾಡಿದಷ್ಟೂ ವಾಹನಗಳ ಸಂಖ್ಯೆ ಹೆಚ್ಚುತ್ತದೆಯೇ ಹೊರತು ವಾಹನ ದಟ್ಟಣೆ ಕಡಿಮೆ ಆಗುವುದಿಲ್ಲ ಎನ್ನುವುದು ಜಗತ್ತಿಗೇ ತಿಳಿದ ಸತ್ಯ. ಹೀಗಿರುವಾಗ ಸಾರ್ವಜನಿಕ ಸಾರಿಗೆ ಬಲಪಡಿಸುವ ಬದಲು, ಜನರನ್ನು ಗಂಟೆಗಟ್ಟಲೇ ರಸ್ತೆ ಗಳಲ್ಲಿಯೇ ಹೈರಾಣಾ ಗಿಸುತ್ತಿರುವುದು ಯಾವ ಖುಷಿಗಾಗಿ. ಸಂಚಾರ ಎಂಬುದು ನೀರಿನ ಹರಿವಿನಂತೆ. ಮೇಲ್ಸೇತುವೆ ಇಳಿದ ಕೂಡಲೇ ಸಿಗ್ನಲ್‌ನಲ್ಲಿ ನೂರಾರು ವಾಹನಗಳು ಬಂದು ಅಪ್ಪಳಿಸಿದರೆ, ಅಲ್ಲಿ ಸುಗಮ ಸಂಚಾರ ಸಾಧ್ಯವೇ ಎಂದು ಸಂಸದರು ಟೀಕಿಸಿದ್ದಾರೆ.

ಕೇವಲ ಟ್ರಾಫಿಕ್ ಅನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಶಿಫ್ಟ್ ಮಾಡುವುದೇ ಸಾಧನೆಯೇ. ನಮ್ಮ ಬೆಂಗಳೂರು ಮಾದರಿ ನಗರವಾಗಬೇಕೇ ಹೊರತು, ಹದಗೆಟ್ಟ ಮೂಲಸೌಕರ್ಯದ ಪ್ರಯೋಗ ಶಾಲೆಯಾಗಬಾರದು.

ಬೆಂಗಳೂರಿಗರ ತೆರಿಗೆ ಹಣವನ್ನು ಇಂತಹ 'Trial and Error' ಪ್ರಯೋಗಗಳಿಗೆ ಬಲಿ ಕೊಡಬಾರದು. ನಮಗೆ ಬೇಕಿರೋದು ದೂರದೃಷ್ಟಿಯ ಯೋಜನೆಗಳು, ಕೇವಲ ಕಣ್ಣೊರೆಸುವ ತಂತ್ರಗಳಲ್ಲ ಎಂದು ತೇಜಸ್ವಿಸೂರ್ಯ ವಾಗ್ದಾಳಿ ನಡೆಸಿದ್ದಾರೆ.




ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಐಯುಟಿಯುಸಿ ಅಡಿಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಸದಸ್ಯರು ವೇತನ ಬಾಕಿ ಬಿಡುಗಡೆಗೆ ಒತ್ತಾಯಿಸಿ ಬುಧವಾರ ಧರಣಿ ನಡೆಸಿದರು.

# ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ಸಂಸದ ಬಿ.ವೈ.ರಾಘವೇಂದ್ರ ನಿವಾಸಕ್ಕೆ ಯುವ ಕಾಂಗ್ರೆಸ್‌ನಿಂದ ಮುತ್ತಿಗೆ ಯತ್ನ

**ಶಿವಮೊಗ್ಗ, ಮೇ 13:** ರಾಜಸ್ಥಾನ ಮತ್ತು ಉತ್ತರಾಖಂಡದಲ್ಲಿ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ ಸಂಸದ ರಾಘವೇಂದ್ರ ಅವರ ಮನೆಗೆ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆಗೆ ಯತ್ನಿಸಿ, ಪ್ರತಿಭಟನೆ ನಡೆಸಿದ್ದಾರೆ.




ವಿನೋಬನಗರ ಪೊಲೀಸ್ ಚೌಕಿ ಮುಂಭಾಗದ ವೃತ್ತದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಹಾಕಿದರು. ಕೇಂದ್ರ ಸರ್ಕಾರ ನೀಟ್ ಪರೀಕ್ಷೆ ಸರಿಯಾಗಿ ನಡೆಸದೇ, ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ. ನೀಟ್ ಪರೀಕ್ಷೆಯನ್ನು ಬರೆಯಲು ವಿದ್ಯಾರ್ಥಿಗಳು ಕಷ್ಟಪಟ್ಟು ಹಗಲು – ರಾತ್ರಿ ಓದಿ ಪರೀಕ್ಷೆ ಬರೆದರೆ, ಈಗ ಪರೀಕ್ಷೆಯನ್ನು ರದ್ದು ಮಾಡಿರುವುದು ವಿದ್ಯಾರ್ಥಿಗಳಿಗೆ ಬರ ಸಿಡಿಲು ಬಡಿದಂತೆ ಆಗಿದೆ.ಈಗ ಮತ್ತೊಮ್ಮೆ ಪರೀಕ್ಷೆ ಬರೆಯಬೇಕೆಂದು ವಿದ್ಯಾರ್ಥಿಗಳಿಗೆ ಹೇಳುತ್ತಿರುವುದು ಅವರಿಗೆ ಆಘಾತವನ್ನುಂಟು ಮಾಡಿದೆ. ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹಿತ ಕಾಯುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ, ಸಂಸದರ ಮನೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ವಿನೋಬನಗರ ಪೊಲೀಸರು ಸಂಸದರ ಮನೆ ರಸ್ತೆಗೆ ಬ್ಯಾರಿಕೇಡ್ ಹಾಕಿ ಏಕಾಏಕಿ ನುಗ್ಗಲು ಯತ್ನಿಸಿದ ಪ್ರತಿಭಟನಗಾರರನ್ನು ತಡೆದರು.ಆದರೂ ಬಿಡದ ಯುವ ಕಾಂಗ್ರೆಸ್ ಕಾರ್ಯಕರ್ತರು ಬ್ಯಾರಿಕೇಡ್ ಮೇಲೆ ಹತ್ತಿ ಜಿಗಿಯಲು ಯತ್ನಿಸಿದರು. ಪೊಲೀಸರು ತಕ್ಷಣ ಅವರನ್ನು ತಡೆದು ಬಂಧಿಸಿ ಡಿಎಆರ್ ಪೊಲೀಸ್ ಮೈದಾನಕ್ಕೆ ಕರೆದುಕೊಂಡು ಹೋದರು. ಪ್ರತಿಭಟನೆಯು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ಹರ್ಷಿತ್ ಗೌಡ ಅವರ ನೇತೃತ್ವದಲ್ಲಿ ನಡೆಸಲಾಯಿತು. ಪ್ರತಿಭಟನೆಯಲ್ಲಿ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಚೇತನ್ ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ಹಾಜರಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಹಾಗೂ ವಿದ್ಯಾರ್ಥಿಗಳಿಗೆ ಶೀಘ್ರ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಹುಬ್ಬಳ್ಳಿ ಧಾರವಾಡ ಮಹಾನಗರ ಯುವ ಕಾಂಗ್ರೆಸ್ ನೇತೃತ್ವದಲ್ಲಿ ನಗರದಲ್ಲಿಯೂ ಬೃಹತ್ ಪ್ರತಿಭಟನೆ ನಡೆಸಲಾಯಿತು.ಇಲ್ಲಿನ ರಮೇಶ ಭವನದಿಂದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನಿವಾಸದವರೆಗೆ ಪ್ರತಿಭಟನಾ ರ‍್ಯಾಲಿ ನಡೆಸಿ, ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಆಗ ಪೊಲೀಸರು ಕಾಂಗ್ರೆಸ್ ಕಾರ್ಯಕರ್ತರನ್ನು ವಶಕ್ಕೆ ಪಡೆದುಕೊಂಡರು. ಈ ವೇಳೆ, ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡಿದೆ. ಇದು ದೇಶದಲ್ಲಿ ನಡೆದ ಬೃಹತ್ ಹಗರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ಈ ವೇಳೆ ಮಾತನಾಡಿದ ಹುಬ್ಬಳ್ಳಿ –ಧಾರವಾಡ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಪಾಟೀಲ್, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಅವರು ಸಚಿವರಾದ ನಂತರ ಎರಡನೇ ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಇದೀಗ ಮತ್ತೊಮ್ಮೆ ಮರುಪರೀಕ್ಷೆ ಕರೆಯಲಾಗುತ್ತಿದೆ. ಇದೊಂದು ಕಮರ್ಷಿಯಲ್ ಪರೀಕ್ಷೆ ಆಗುತ್ತಿದೆ. ವಿದ್ಯಾರ್ಥಿಗಳಿಗೆ ಪರಿಹಾರ ಕೊಡಬೇಕು. ಈ ವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳು ಪರೀಕ್ಷೆ ಮೇಲೆ ನಂಬಿಕೆ ಕಳೆದುಕೊಳ್ಳುವ ಹಾಗೇ ಆಗಿದೆ. ಕೂಡಲೇ ನೀಟ್ ಪರೀಕ್ಷೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

# ಕೈಗಾರಿಕೆ ಸ್ಥಾಪನೆಗಾಗಿ ಭೂಮಿ ಸ್ವಾಧೀನ, ನಮ್ಮ ಜಮೀನು ನಮಗೆ ಮರಳಿಸಿ: ರೈತರ ಹೋರಾಟ




**ಕಲಬುರಗಿ, ಮೇ. 13:** ಕೈಗಾರಿಕೆ ಸ್ಥಾಪನೆಗಾಗಿ ನಮ್ಮ ಜಮೀನು ಸ್ವಾಧೀನಕ್ಕೆ ಪಡೆದು ದಶಕ ಕಳೆದರೂ ಸಕಾಲಕ್ಕೆ ಕಾರ್ಖಾನೆ ನಿರ್ಮಿಸದ ಕಾರಣ ನಮ್ಮ ಭೂಮಿ ನಮಗೆ ಬಿಟ್ಟು ಕೊಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಲಬುರಗಿ ತಾಲ್ಲೂಕಿನ ಕಿರಣಗಿ, ಫಿರೋಜಾಬಾದ್, ಸೋಮನಾಥಹಳ್ಳಿಯ ಭೂಸಂತ್ರಸ್ತರ ಹೋರಾಟ ಸಮಿತಿ ನೇತೃತ್ವದಲ್ಲಿ ರೈತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕನ್ನಡ ಭವನದ ಆವರಣದಲ್ಲಿ ಜಮಾಯಿಸಿದ ರೈತರು, ಸರ್ಕಾರ, ಜಿಲ್ಲಾಡಳಿತ ಹಾಗೂ ಸಿಮೆಂಟ್ ಕಂಪನಿ ವಿರುದ್ಧ ಘೋಷಣೆ ಕೂಗುತ್ತ ಜಿಲ್ಲಾಧಿಕಾರಿ ಕಚೇರಿ ತನಕ ಪ್ರತಿಭಟನಾ ಮೆರವಣಿಗೆ ನಡೆಸಿದರು. ನೆತ್ತಿ ಸುಡುವ ಬಿಸಿಲಿನಲ್ಲಿ ಘೋಷಣೆ ಕೂಗಿ, ಹಸಿರು ಟವಲ್ ಬೀಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ರೈತ ಮುಖಂಡ ಶಂಕ್ರಪ್ಪ ಗೊಬ್ಬೂರ್, ಸಿಮೆಂಟ್ ಕಾರ್ಖಾನೆ ಸ್ಥಾಪನೆಗೆ ರಾಜ್ಯ ಸರ್ಕಾರವು ಕೆಐಎಡಿಬಿ ಮೂಲಕ 2013ರಲ್ಲಿ ಕಿರಣಗಿ, ಸೋಮನಾಥಹಳ್ಳಿ ಹಾಗೂ ಫಿರೋಜಾಬಾದ್ ಗ್ರಾಮಗಳ ವ್ಯಾಪ್ತಿಯ 1,821 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿತ್ತು.ಆದರೆ, ಈ ತನಕ ಕಾರ್ಖಾನೆ ಆರಂಭಿಸಿಲ್ಲ. ಇದು ನಿಯಮಗಳ ಉಲ್ಲಂಘನೆ. ಹೀಗಾಗಿ ಕಾರ್ಖಾನೆಯು ಜಮೀನು ರೈತರಿಗೆ ಮರಳಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೇ, 2013ರ ಸ್ವಾಧೀನ ಕಾಯ್ದೆ ಜಾರಿಯಾದ ಬಳಿಕ ನಮ್ಮ 1,821 ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಹೀಗಾಗಿ ಭೂಸಾಧೀನ ಪ್ರಕ್ರಿಯೆ ಕುರಿತ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯಿದೆ 2013ರ ಕಾಯ್ದೆ ಕಲಂ 24 (2) ಪ್ರಕಾರ ಗುಲಬರ್ಗಾ ಸಿಮೆಂಟ್ ಕಂಪನಿ ಯೊಂದಿಗಿನ ಭೂಸ್ವಾಧೀನ ಅಧಿಸೂಚನೆ ರದ್ದುಗೊಳಿಸಿ, ಸದರಿ ಜಮೀನನ್ನು ರೈತರಿಗೆ ಮರಳಿಸಬೇಕು ಎಂದು ಕೋರಿದರು.

ರೈತ ಮುಖಂಡ ಶರಣಬಸಪ್ಪ ಮಮಶೆಟ್ಟಿ ಮಾತನಾಡಿ, ಭೂ ಸ್ವಾಧೀನಕ್ಕೆ ಪಡೆದ ಐದು ವರ್ಷಗಳಲ್ಲಿ ಕಾರ್ಖಾನೆ ಆರಂಭಿಸಬೇಕು ಎಂದು ನ್ಯಾಷನಲ್ ಮ್ಯಾನುಫ್ಯಾಕ್ಚರಿಂಗ್ ಕಾಯ್ದೆ ಹೇಳುತ್ತದೆ. ಅದನ್ನು ಗುಲಬರ್ಗಾ ಸಿಮೆಂಟ್ ಕಾರ್ಖಾನೆ ಉಲ್ಲಂಘಿಸಿದೆ. ಹೀಗಾಗಿ ಕಾರ್ಖಾನೆಯು ಸ್ವಾಧೀನಕ್ಕೆ ಪಡೆದ 1,821 ಎಕರೆ ಜಮೀನನ್ನು ರೈತರಿಗೆ ಮರಳಿಸಬೇಕು. ಆಗಿನ ಜಿಲ್ಲಾಧಿಕಾರಿ ಪ್ರತಿ ಎಕರೆಗೆ 16 ಲಕ್ಷ ಭೂಪರಿಹಾರ ನಿಗದಿ ಮಾಡಿದ್ದರು. ಆದರೆ, ಆ ಠರಾವು ಗಾಳಿಗೆ ತೂರಿ ಕಡಿಮೆ ಪರಿಹಾರ ಕೊಟ್ಟು ರೈತರಿಗೆ ಮೋಸ ಮಾಡಿದೆ. ಸರ್ಕಾರ ಸಂತ್ರಸ್ತರ ನೆರವಿಗೆ ಧಾವಿಸಬೇಕು. ಎಲ್ಲ ರೈತರ ಭೂಮಿಗೂ ಈಗಿನ ಮಾರುಕಟ್ಟೆ ದರವನ್ನು ನಿಗದಿಪಡಿಸಿ, ಅದರಂತೆ ಭೂಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು.

ರೈತ ಮಹಿಳೆ ಸಿದ್ಧಮ್ಮ ಮಾತನಾಡಿ, ಕಾರ್ಖಾನೆ ಆರಂಭಿಸಲು 13 ವರ್ಷಗಳ ಹಿಂದೆ ಜಮೀನು ಪಡೆದರೂ ಈತನಕ ಅದು ಆರಂಭವಾಗಿಲ್ಲ. ಭೂಪರಿಹಾರವನ್ನೂ ಪೂರ್ತಿ ವಿತರಿಸಿದೇ ಅನ್ಯಾಯ ಮಾಡಿದ್ದಾರೆ. ನ್ಯಾಯಬದ್ಧವಾದ ಪರಿಹಾರ ನಮಗೆ ವಿತರಿಸಬೇಕು ಇಲ್ಲವೇ ನಮ್ಮ ಜಮೀನು ನಮಗೆ ವಾಪಸ್ ಕೊಡಬೇಕು ಎಂದು ಆಗ್ರಹಿಸಿದರು. ಬಳಿಕ ಐದು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಗೆ ಮನವಿ ಸಲ್ಲಿಸಲಾಯಿತು.

### ಜೀನ್ಸ್ ಪಾರ್ಕ್ ನಿರ್ಮಾಣದ ಹೆಸರಲ್ಲಿ ರೈತರ ಭೂ ಕಬಳಿಕೆ ಯತ್ನ?

# ಕೆಐಎಡಿಬಿ ವಿರುದ್ಧ ಗಂಭೀರ ಆರೋಪ? ಬೆದರಿಕೆ, ಬ್ರೋಕರ್‌ಗಳ ಹಾವಳಿ, ರೈತರ ಕಣ್ಣೀರು

**ಬಳ್ಳಾರಿ ಮೇ 13.** ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತಾವಿತ ಜೀನ್ಸ್ ಪಾರ್ಕ್ ನಿರ್ಮಾಣದ ಹೆಸರಿನಲ್ಲಿ ರೈತರ ಭೂಮಿಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳಲು ಯತ್ನ ನಡೆಯುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿದ್ದು, ಇದೀಗ ಈ ವಿಚಾರ ಜಿಲ್ಲೆಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿದೆ. ವಿಶೇಷವಾಗಿ ಸಂಜೀವರಾಯನಕೋಟೆ, ಹಲಕುಂದಿ, ಮಿಂಚೇರಿ ಸೇರಿದಂತೆ ಕುಡತಿನಿ ಸುತ್ತಮುತ್ತಲಿನ ಭಾಗಗಳ ರೈತರು ತಮ್ಮ ಭೂಮಿಗಳನ್ನು ನ್ಯಾಯಯುತ ಬೆಲೆಗೆ ನೀಡಲು ಸಿದ್ಧರಾಗಿದ್ದರೂ, ಅಧಿಕಾರಿಗಳು ಹಾಗೂ ಮಧ್ಯವರ್ತಿಗಳ ಒತ್ತಡ, ಬೆದರಿಕೆ ಮತ್ತು ಒಳಸಂಚುಗಳಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ.

ನ್ಯಾಯಾಲಯ ಆದೇಶದ ದರ ಒಂದು, ರೈತರಿಗೆ ನೀಡಲು ಯತ್ನಿಸುತ್ತಿರುವುದು ಮತ್ತೊಂದು?

ಈ ಭಾಗದಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಲಯವು ಪ್ರತಿ ಎಕರೆಗೆ ಸುಮಾರು 1 ಕೋಟಿ 1 ಲಕ್ಷ ರೂಪಾಯಿ ಪರಿಹಾರ ನಿಗದಿ ಮಾಡಿದೆ ಎಂದು ರೈತರು ಹೇಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ರೈತರಿಗೆ ಪ್ರತಿ ಎಕರೆಗೆ ಕೇವಲ 65 ಲಕ್ಷ ರೂಪಾಯಿಗೆ ಒಪ್ಪಂದ ಮಾಡಿಸಲು ಒತ್ತಡ ತರಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಇದಕ್ಕೆ ಒಪ್ಪದ ರೈತರಿಗೆ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಸೇರಿ ಬೆದರಿಕೆ ಹಾಕುತ್ತಿದ್ದಾರೆ ಎಂದು ರೈತರು ದೂರಿದ್ದಾರೆ.

ಈಗಲೇ ಭೂಮಿ ಕೊಡಿ, ಇಲ್ಲವಾದರೆ ಸರ್ಕಾರ ನಿಮ್ಮ ಭೂಮಿಯನ್ನು ಕೇವಲ 5 ಲಕ್ಷ ರೂಪಾಯಿಗೆ ಪಡೆದುಕೊಳ್ಳುತ್ತದೆ. ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದರೆ ಸಾಕು, ನಿಮ್ಮಿಂದ ಏನೂ ಮಾಡಲು ಆಗುವುದಿಲ್ಲ ಎಂದು ಕೆಲವರು ಬೆದರಿಕೆ ಹಾಕುತ್ತಿದ್ದಾರೆ ಎಂದು ರೈತರು ಕಣ್ಣೀರಿನಿಂದ ಹೇಳಿಕೊಂಡಿದ್ದಾರೆ.

ಪ್ರತಿ ಎಕರೆಗೆ ಲಕ್ಷಾಂತರ ಕಮಿಷನ್ ಆರೋಪ: ಭೂಮಿ ವ್ಯವಹಾರದಲ್ಲಿ ಕೆಲ ಅಧಿಕಾರಿಗಳು ಮತ್ತು ಬ್ರೋಕರ್‌ಗಳು ಪ್ರತಿ ಎಕರೆಗೆ ಸುಮಾರು 5 ಲಕ್ಷ ರೂಪಾಯಿವರೆಗೆ ಕಮಿಷನ್ ಪಡೆಯಲು ಯತ್ನಿಸುತ್ತಿದ್ದಾರೆ ಎಂಬ ಮಾತುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹರಿದಾಡುತ್ತಿವೆ. ರೈತರ ಸಂಕಷ್ಟದ ಮೇಲೆ ಕೆಲವರು ಕೋಟ್ಯಂತರ ರೂಪಾಯಿ ಗಳಿಸಲು ಮುಂದಾಗಿದ್ದಾರೆ ಎಂಬ ಆರೋಪ ಇದೀಗ ಮತ್ತಷ್ಟು ಗಂಭೀರ ಸ್ವರೂಪ ಪಡೆದುಕೊಂಡಿದೆ.

ರೈತರು ಹೇಳುವ ಪ್ರಕಾರ, ನೇರವಾಗಿ ಅಧಿಕಾರಿಗಳು ಮಾತುಕತೆ ನಡೆಸದೆ, ಬಳ್ಳಾರಿ ನಗರ ಮೂಲದ ಕೆಲವು ಬ್ರೋಕರ್‌ಗಳನ್ನು ಬಳಸಿಕೊಂಡು ರೈತರನ್ನು ಸಂಪರ್ಕಿಸಲಾಗುತ್ತಿದೆ. ಒಪ್ಪಿಕೊಳ್ಳಿ, ಇಲ್ಲವಾದರೆ ಮುಂದಿನ ದಿನಗಳಲ್ಲಿ ಇನ್ನೂ ಕಡಿಮೆ ಬೆಲೆ ಸಿಗುತ್ತದೆ ಎಂದು ಒತ್ತಡ ತರುತ್ತಿದ್ದಾರೆ ಎಂಬುದು ರೈತರ ಆರೋಪ.

ಭೂಸ್ವಾಧೀನ ಪ್ರಕ್ರಿಯೆ ಪಾರದರ್ಶಕವಾಗಿದೆಯೇ ರೈತರಿಗೆ ನ್ಯಾಯಯುತ ಪರಿಹಾರ ಸಿಗುತ್ತಿದೆಯೇ? ಮಧ್ಯವರ್ತಿಗಳ ಪಾತ್ರ ಏನು ಎಂಬ ಪ್ರಶ್ನೆಗಳಿಗೆ ಸರ್ಕಾರ ಹಾಗೂ ಕೆಐಎಡಿಬಿ ಸ್ಪಷ್ಟ ಉತ್ತರ ನೀಡಬೇಕಾದ ಅಗತ್ಯ ಇದೀಗ ಎದುರಾಗಿದೆ.

# ಬಾಲಕನಿಂದ ಮಸಾಜ್ ಮಾಡಿಸಿಕೊಂಡ ಆರೋಪ ವಚನಾನಂದಶ್ರೀ ವಿರುದ್ಧ ಪೋಕ್ಸೋ ಪ್ರಕರಣ ದಾಖಲು

**ದಾವಣಗೆರೆ, ಮೇ 13:** ಹರಿಹರ ಪಂಚಮಸಾಲಿ ಪೀಠದ ವಚನಾನಂದ ಶ್ರೀ ಅವರ ವಿರುದ್ಧ ಬಾಲಕನ ಮೇಲಿನ ದೌರ್ಜನ್ಯ ಆರೋಪದ ಹಿನ್ನೆಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಈ ಘಟನೆ ಸಂಬಂಧ ಪೊಲೀಸ್ ತನಿಖೆ ಆರಂಭವಾಗಿದ್ದು, ದೂರುದಾರರು ಹಾಗೂ ಸಂಬಂಧಿತ ಸಾಕ್ಷ್ಯಗಳನ್ನು ಆಧರಿಸಿ ವಿಚಾರಣೆ ಮುಂದು ವರಿದಿದೆ.



ಈ ಪ್ರಕರಣ ಮೊದಲು ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಆದರೆ ಆರೋಪಿತ ಘಟನೆ ನಡೆದಿರುವ ಸ್ಥಳ ಹರಿಹರ ಗ್ರಾಮಾಂತರ ಠಾಣೆಯ ವ್ಯಾಪ್ತಿಗೆ ಒಳಪಡುವುದರಿಂದ ಎಫ್ಐಆರ್ ಅನ್ನು ಅಲ್ಲಿಗೆ ವರ್ಗಾಯಿಸಲಾಗಿದೆ. ಸ್ಥಳೀಯ ಪೊಲೀಸರು ಪ್ರಕರಣವನ್ನು ಸ್ವೀಕರಿಸಿ ಅಧಿಕೃತ ತನಿಖೆ ಆರಂಭಿಸಿದ್ದಾರೆ. ದೂರು ನೀಡಿದ ಮಹಿಳೆ, ಮಠದ ವಸತಿ ನಿಲಯದಲ್ಲಿ ವಾಸವಾಗಿದ್ದ ತನ್ನ ಮಗನಿಂದ ಸ್ವಾಮೀಜಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು ಎಂಬ ಆರೋಪವನ್ನು ಮಾಡಿರುವುದಾಗಿ ವರದಿಯಾಗಿದೆ.


ಈ ಹಿನ್ನೆಲೆ ಅವರು ಲಕ್ಷ್ಮೇಶ್ವರ ಠಾಣೆಗೆ ದೂರು ಸಲ್ಲಿಸಿದ್ದರು. ದೂರು ದಾಖಲಾಗುತ್ತಿದ್ದಂತೆಯೇ ಪ್ರಕರಣ ದಾಖಲಾಗಿದೆ.

ಪೊಲೀಸರು ಈಗಾಗಲೇ ದೂರುದಾರರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಸಂತ್ರಸ್ತ ಬಾಲಕನ ಹೇಳಿಕೆಯನ್ನು ಸಹ ಅಧಿಕೃತವಾಗಿ ಪಡೆದು ಪರಿಶೀಲನೆ ನಡೆಸುತ್ತಿದ್ದಾರೆ. ತನಿಖೆ ಈಗಾಗಲೇ ಪ್ರಾರಂಭಿಸಲಾಗಿದೆ. ಸಂತ್ರಸ್ತ ಬಾಲಕನ ಹೇಳಿಕೆಯನ್ನು ಪಡೆಯಲಿದ್ದೇವೆ ಎಂದು ಜಿಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್.ಟಿ.ಶೇಖರ್ ತಿಳಿಸಿದ್ದಾರೆ.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಲ್ಲಿನ ಮಕ್ಕಳ ಹಾಗೂ ಸಂಬಂಧಿತ ವ್ಯಕ್ತಿಗಳ ಹೇಳಿಕೆಗಳನ್ನು ದಾಖಲಿಸಿದೆ ಎಂದು ತಿಳಿದುಬಂದಿದೆ.

### ಕುಕ್ಕೆ ಸುಬ್ರಹ್ಮಣ್ಯ ದೇಗುಲದಲ್ಲಿ ದೇವರ ದರ್ಶನಕ್ಕೆ ಹೆಚ್ಚುವರಿ ಸಮಯ

# ಬೆಳಗ್ಗೆ 6.30ರಿಂದ ಮಧ್ಯಾಹ್ನ 2 ಗಂಟೆ, ಅಪರಾಹ್ನ 3 ಗಂಟೆಯಿಂದ ರಾತ್ರಿ 8.30ರವರೆಗೆ



**ಸುಬ್ರಹ್ಮಣ್ಯ (ದಕ್ಷಿಣ ಕನ್ನಡ), ಮೇ.13:** ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ದೇವರ ದರ್ಶನ ಸಮಯದಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದ್ದು, ಭಕ್ತರಿಗೆ ಇದೀಗ ಹೆಚ್ಚುವರಿ ಒಂದು ಗಂಟೆಯ ದರ್ಶನ ಅವಕಾಶ ಲಭ್ಯವಾಗಿದೆ. ದೇವಸ್ಥಾನದ ಆಡಳಿತ ಮಂಡಳಿಯ ನಿರ್ಣಯದ ಮೇರೆಗೆ ಈ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.ಈ ಮೊದಲು ಮಧ್ಯಾಹ್ನ 1.30ರಿಂದ 3.30ರ ವರೆಗೆ ದೇವರ ದರ್ಶನವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾ ಗುತ್ತಿತ್ತು. ಆದರೆ ಭಕ್ತರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಇದೀಗ ಮಧ್ಯಾಹ್ನ 2ರಿಂದ 3ರ ವರೆಗೆ ಮಾತ್ರ ದರ್ಶನವನ್ನು ತಾತ್ಕಾಲಿಕವಾಗಿ ಬಂದ್ ಮಾಡುವಂತೆ ನಿರ್ಧರಿಸಲಾಗಿದೆ. ಇದರೊಂದಿಗೆ ಭಕ್ತರಿಗೆ ಮಧ್ಯಾಹ್ನ ಇನ್ನೊಂದು ಗಂಟೆ ಹೆಚ್ಚುವರಿ ದರ್ಶನದ ಅವಕಾಶ ದೊರಕಿದೆ.ಹೊಸ ವೇಳಾಪಟ್ಟಿಯ ಪ್ರಕಾರ ಬೆಳಗ್ಗೆ 6.30ರಿಂದ ಮಧ್ಯಾಹ್ನ 2ರವರೆಗೆ ಹಾಗೂ ಅಪರಾಹ್ನ 3.00 ರಿಂದ ರಾತ್ರಿ 8.30ರವರೆಗೆ ದೇವರ ದರ್ಶನ ಲಭ್ಯವಿರಲಿದೆ ಎಂದು ದೇವಸ್ಥಾನ ಆಡಳಿತ ತಿಳಿಸಿದೆ.

ಈ ವ್ಯವಸ್ಥೆಯನ್ನು ಮೇ 10ರಿಂದಲೇ ಜಾರಿಗೆ ತರಲಾಗಿದ್ದು, ಭಕ್ತರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ದೂರದ ಊರುಗಳಿಂದ ಆಗಮಿಸುವ ಭಕ್ತರಿಗೆ ಈ ಬದಲಾವಣೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ಮಾತನಾಡಿ, "ಭಕ್ತರ ಬೇಡಿಕೆ ಹಾಗೂ ಅನುಕೂಲತೆಯನ್ನು ಪರಿಗಣಿಸಿ ಆಡಳಿತ ಮಂಡಳಿ ಈ ತೀರ್ಮಾನ ಕೈಗೊಂಡಿದೆ" ಎಂದು ತಿಳಿಸಿದ್ದಾರೆ.

2025–26ನೇ ಆರ್ಥಿಕ ವರ್ಷದಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯ ದಾಖಲೆಯ 167.89 ಕೋಟಿ ರೂ. ಆದಾಯ ಗಳಿಸಿ ರಾಜ್ಯದ ಮುಜರಾಯಿ ಇಲಾಖೆಯ ಅಧೀನದ ದೇವಸ್ಥಾನಗಳಲ್ಲಿ ಸತತ 15ನೇ ವರ್ಷವೂ ಮೊದಲ ಸ್ಥಾನ ಪಡೆದುಕೊಂಡಿದೆ. 2024–25ನೇ ಸಾಲಿನಲ್ಲಿ 155 ಕೋಟಿ ರೂ. ಆದಾಯ ಗಳಿಸಿತ್ತು. ಈ ವರ್ಷ 12 ಕೋಟಿ ರೂ. ಅಧಿಕ ಆದಾಯ ಗಳಿಸಿದೆ. ಈ ಮೂಲಕ ಸುಬ್ರಹ್ಮಣ್ಯ ದೇವಾಲಯ ಮತ್ತೊಮ್ಮೆ ತನ್ನ ಮಹಿಮೆಯನ್ನು ಸಾಬೀತುಪಡಿಸಿದೆ. ಹರಕೆ ಸೇವೆ, ಹುಂಡಿ ಕಾಣಿಕೆ, ಶಾಶ್ವತ ಸೇವಾನಿಧಿ, ಛತ್ರ ಹಾಗೂ ಕಟ್ಟಡ ಬಾಡಿಗೆ, ಅನ್ನಸಂತರ್ಪಣೆ ನಿಧಿ, ಹೂಡಿಕೆ ಬಡ್ಡಿ ಮತ್ತು ಕೃಷಿ ತೋಟದ ಆದಾಯದಿಂದ ಪ್ರಮುಖ ಪಾಲು ಬಂದಿದೆ.

# ಮಾನವೀಯತೆ ಮೆರೆದ ಮಾಜಿ ಮೇಯರ್ ರಾಜೇಶ್ವರಿ

**ಬಳ್ಳಾರಿ, ಮೇ 13.** ಬಳ್ಳಾರಿಯ ಬಿಮ್ಸ್ ಆಸ್ಪತ್ರೆ ಮುಂದೆ ಬಸ್ ನಿಲ್ದಾಣದಲ್ಲಿ ಅನಾರೋಗ್ಯದಿಂದ ನರಳುತ್ತಿದ್ದ ಆನಾಥ ವೃದ್ಧೆ ಮಹಿಳೆಗೆ ಚಿಕಿತ್ಸೆ ಕೊಡಿಸುವ ಮೂಲಕ ಮಾಜಿ ಮೇಯರ್ ಎಂ.ರಾಜೇಶ್ವರಿ ಅವರು ಮಾನವೀಯತೆ ಮೆರೆದಿದ್ದಾರೆ.



ಇದೇ ಸಂದರ್ಭ ಸ್ಥಳೀಯ ಪತ್ರಕರ್ತ ಜಂಬುನಾಥ್ ಅವರು 112 ವಾಹನಕ್ಕೆ ಕರೆ ಮಾಡಿ ಘಟನೆ ಸ್ಥಳಕ್ಕೆ ಕರೆಸಿ, ಆನಂತರ ಸರ್ಕಾರಿ 108 ವಾಹನಕ್ಕೆ ಕರೆ ಮಾಡಿ ಅವರನ್ನು ಸಹ ಕರೆಸಿದ್ದಾರೆ. ಈ ಸಂದರ್ಭ ವಿಷಯ ಗಮನಕ್ಕೆ ಬರುತ್ತಿದ್ದಂತೆ ಮಹಾನಗರ ಪಾಲಿಕೆ ಸದಸ್ಯೆ ಹಾಗೂ ಮಾಜಿ ಮೇಯರ್ ರಾಜೇಶ್ವರಿ ಸುಬ್ಬರಾಯುಡು ಅವರು ತಕ್ಷಣ ಸ್ಪಂದಿಸಿದ್ದಾರೆ.

ಅನಾರೋಗ್ಯದಿಂದ ನರಳುತ್ತಿದ್ದ ಮಹಿಳೆಯ ಸಮಸ್ಯೆ ಬಗ್ಗೆ ತಿಳಿಸಿ ಅವರು ಸಹ ಘಟನಾ ಸ್ಥಳಕ್ಕೆ ತೆರಳಿದರು. ತುರ್ತು ಚಿಕಿತ್ಸೆಗಾಗಿ ಬಿಮ್ಸ್ ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿನಲ್ಲಿ ಸಂಬಂಧಪಟ್ಟ ವೈದ್ಯರಿಗೆ ಅನಾಥ ವೃದ್ಧೆಯ ಬಗ್ಗೆ ಕಾಳಜಿ ವಹಿಸಿ ಎಂದು ತಿಳಿಸಿ ಸೇರಿಸಿದ್ದಾರೆ.

ಕಳೆದ ಒಂದು ವಾರದಿಂದ ಈ ಅನಾಥ ವೃದ್ಧೆ ಮಹಿಳೆ ಆಸ್ಪತ್ರೆ ಮುಂಭಾಗದ ಬಸ್ಸು ನಿಲ್ದಾಣದಲ್ಲಿ ಅನಾರೋಗ್ಯದಿಂದ ನರಳುತ್ತಿದ್ದು. ಯಾವುದು ಗುರುತು ಇಲ್ಲದ ವಾಹನ ಎರಡು ಕಾಲು ಹಾಗೂ ಸೊಂಟಕ್ಕೆ ತಗುಲಿಸಿ ಹೋಗಿದೆ ಎಂದು ತಿಳಿದುಬಂದಿದೆ.

ಆ ಮಹಿಳೆಯನ್ನು ಪೊಲೀಸ್ ಸಿಬ್ಬಂದಿ ವಿಚಾರಿಸಿದಾಗ ಅವರದ್ದು ಕೊಳಗಲ್ಲು ಗ್ರಾಮ ಎಂದು ತಿಳಿದು ಬಂದಿದೆ. ಅವರಿಗೆ ಯಾರು ಇಲ್ಲ ಉಪ್ಪಾರ ಸಮಾಜ ಎಂದು ಆ ಮಹಿಳೆ ಹೆಸರು ಲಕ್ಷ್ಮೀದೇವಿ ಎಂದು ತಿಳಿದು ಬಂದಿದೆ. ಆ ವೃದ್ಧೆ ಮಹಿಳೆ ಮೇಲೆ ಬಟ್ಟೆ ಇಲ್ಲದೆ ಈ ಬಿಸಿಲಿಗೆ ನರಳುತ್ತಿದ್ದು. ಯಾರು ಸಹ ಮಾನವೀಯತೆಗೆ ಮುಂದೆ ಬಂದಿಲ್ಲ ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ನರಳುತ್ತಿದ್ದ ಮಹಿಳೆಯ ಮುಂದೇನೆ ಆಸ್ಪತ್ರೆಗೆ ಮತ್ತು ಬಸ್ಸ್ ಗಾಗಿ ಆ ನಿಲ್ದಾಣದಲ್ಲಿ ಕಾಯ್ತಾ ನೋಡುತ್ತಾ ಮುಂದೆ ಹೋಗುವ ಘಟನೆಗಳು ಕಂಡುಬಂದಿದ್ದವು.

# ಸ್ಪೀಕರ್ ಮೇಲೆ ಹಲ್ಲೆಗೆ ಯತ್ನಿಸಿದ 11 ಮಂದಿ ವಿರುದ್ಧ ಎಫ್ಐಆರ್

**ಮಂಗಳೂರು, ಮೇ 13:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರ ಮೇಲೆ ಹಲ್ಲೆಗೆ ಯತ್ನಿಸಿದ ಆರೋಪದ ಮೇಲೆ 11 ಜನರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಮೇ.7ರಂದು ಮಂಗಳೂರು ಬಳಿಯ ಉಳ್ಳಾಲ ಪ್ರದೇಶದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ ನಂತರ ಖಾದರ್ ಅವರು ಬೆಂಗಾವಲು ಪಡೆಯಲ್ಲಿ ಪ್ರಯಾಣಿಸುತ್ತಿದ್ದಾಗ ಈ ಘಟನೆ ನಡೆದಿದೆ. ಪ್ರತಿಭಟನಾಕಾರರ ಗುಂಪೊಂದು ಬೆಂಗಾವಲು ಪಡೆಯನ್ನು ತಡೆಯಲು ಪ್ರಯತ್ನಿಸಿತು ಮತ್ತು ಅವರ ವಿರುದ್ಧ ಘೋಷಣೆಗಳನ್ನು ಕೂಗಿದೆ.

ಸಭಾಪತಿಯುವರ ಗನ್‌ಮ್ಯಾನ್ ಮೊಹಮ್ಮದ್ ಯಾಸೀನ್ ನೀಡಿದ ದೂರಿನ ಪ್ರಕಾರ, ಕುತ್ತಾರ್ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಬಾಪುನಿ ಸರ್ಕಾರಿ ಅತಿಥಿ ಗೃಹದ ಮುಂದೆ ಜನರ ಗುಂಪೊಂದು ಸ್ಪೀಕರ್ ಅವರ ಬೆಂಗಾವಲು ಪಡೆಯನ್ನು ತಡೆದು, ಭದ್ರತಾ ಅಧಿಕಾರಿಗಳನ್ನು ಕೈಗಳಿಂದ ತಳ್ಳಿತು. ತಮ್ಮ ಸಮಸ್ಯೆಗಳ ಕುರಿತು ಸ್ಪೀಕರ್ ಜೊತೆ ಮಾತನಾಡಲು ಅವಕಾಶ ನೀಡಬೇಕೆಂದು ಒತ್ತಾಯಿಸಿದರು. ಆದರೆ ರಾತ್ರಿ 10.30 ಆಗಿದ್ದರಿಂದ, "ನಾನು ಅವರಿಗೆ ಸ್ಪೀಕರ್ ಭೇಟಿ ಮಾಡಲು ಅವಕಾಶ ನೀಡಲಿಲ್ಲ" ಎಂದು ಯಾಸೀನ್ ದೂರಿನಲ್ಲಿ ತಿಳಿಸಿದ್ದಾರೆ.

ಇತ್ತೀಚಿನ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಖಾದರ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಗಳಿಂದ ಪ್ರತಿಭಟನಾಕಾರರು ಆಕ್ರೋಶಗೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಪೀಕರ್ ಅವರ ಬೆಂಗಾವಲು ಪಡೆ ಸಾಗಿದ ಮಾರ್ಗದ ಬಳಿ ಪ್ರತಿಭಟನಾಕಾರರು ಜಮಾಯಿಸಿದ್ದ ರಿಂದ ಆ ಪ್ರದೇಶದಲ್ಲಿ ಸ್ವಲ್ಪ ಸಮಯ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.

# ಜೀವಜಲಕ್ಕೆ ಸಮಸ್ಯೆ ಆಗದಂತೆ ನಿಗಾವಹಿಸಿ: ಕಲಬುರಗಿ ಡಿಸಿ ಇಕ್ರಮ್ ಶರೀಫ್

**ಕಲಬುರಗಿ, ಮೇ. 13:** ಜಿಲ್ಲೆಯ ಯಾವುದೇ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಕೂಡಲೇ ಕೊಳವೆಬಾವಿ ಬಾಡಿಗೆಗೆ ಪಡೆದು, ಜನವಸತಿ ಪ್ರದೇಶಗಳಿಗೆ ನೀರು ಪೂರೈಸಲು ಕ್ರಮ ಕೈಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅಧಿಕಾರಿಗಳಿಗೆ ಸೂಚಿಸಿದರು.



ಕಳೆದ 3–4 ವರ್ಷಗಳ ಸಮಸ್ಯಾತ್ಮಕ ಗ್ರಾಮಗಳನ್ನು ಮೊದಲು ಪಟ್ಟಿ ಮಾಡಿ, ಅಂಥಲ್ಲಿ ಹೆಚ್ಚು ನಿಗಾ ವಹಿಸಬೇಕು. ಎಲ್ಲಿಯೂ ಕುಡಿಯುವ ನೀರಿನ ತೊಂದರೆ ಆಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸಿ ಎಂದರು.

ನಾವೆಲ್ಲ 21ನೇ ಶತಮಾನದಲ್ಲಿ ಇದ್ದೇವೆ. ಇಂದಿಗೂ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಮಾಡದಿದ್ದರೆ ಅದು ನಮ್ಮ ಆಡಳಿತದ ವೈಫಲ್ಯ ಎಂಬುದನ್ನು ಮರೆಯದಿರಿ. ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿದ್ದಲ್ಲಿ ಕೂಡಲೇ ಜಿಲ್ಲಾ ಪಂಚಾಯಿತಿ ಸಿಇಒ ಮತ್ತು ಡಿಯುಡಿಸಿ ಅವರ ಗಮನಕ್ಕೆ ತರಬೇಕು. ಹಳೇ ಕೊಳವೆಬಾವಿಗಳಿದ್ದಲ್ಲಿ ಅದನ್ನು ಫ್ಲಶ್ ಮಾಡಿಸಬೇಕು. ಟ್ಯಾಂಕರ್ ಮೂಲಕ ನೀರು ಪೂರೈಕೆ ನಮ್ಮ ಕೊನೆ ಆದ್ಯತೆಯಾಗಿರಲಿ.

ಈಗಾಗಲೆ ಅರ್ಧ ಬೇಸಿಗೆ ಕಳೆದಿದೆ. ಇನ್ನೊಂದು ಒಂದು ತಿಂಗಳ ಸವಾಲು ನಮ್ಮ ಮುಂದಿದೆ. ನೀರು ಜೀವ ಜಲ. ಅದು ಇಲ್ಲದಿದ್ದರೆ ಸಕಲ ಪ್ರಾಣಿಗಳಿಗೂ ಸಂಕಟ ತಪ್ಪಿದ್ದಲ್ಲ. ಇನ್ನು ಬೇಸಿಗೆ ಕಾಲದ ಬೆಳೆ ಸಮೀಕ್ಷೆ ವಾರಾಂತ್ಯದಲ್ಲಿ ಪೂರ್ಣಗೊಳಿಸಬೇಕು ಎಂದು ತಹಶೀಲ್ದಾರ್‌ರಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಇಇ ಜಗದೇವ ಜೀವಣಗಿ ಮಾತನಾಡಿ, ಜಿಲ್ಲೆಯಲ್ಲಿ 26 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ' ಎಂದರು. 'ರೈತರೊಂದಿಗೆ ಕೊಳವೆಬಾವಿ ಬಾಡಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿಸಿಕೊಂಡು ದಾಖಲಾತಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಕೆಯುಐಡಿಎಫ್‌ಸಿ ಅಧೀಕ್ಷಕ ಎಂಜಿನಿಯರ್ ಆರ್.ಪಿ.ಜಾಧವ ಮಾತನಾಡಿ, ಮಹಾನಗರಕ್ಕೆ ಭೀಮಾ ದಿಂದ 60 ಎಂಎಲ್‌ಡಿ, ಬೆಣ್ಣೆತೊರಾ ದಿಂದ 22 ಎಂಎಲ್‌ಡಿ ಪಡೆದು ನೀರು ಪೂರೈಸಲಾಗುತ್ತಿದೆ. ಭೀಮಾ ನದಿಯಿಂದ ಮುಂದಿನ 22 ದಿನಕ್ಕೆ ಆಗುವಷ್ಟು ಮಾತ್ರ ನೀರು ಶೇಖರಣೆ ಇದ್ದು, ಮುಂಗಾರು ಮಳೆ ತಡವಾದರೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಹೀಗಾಗಿ ನಾರಾಯಣಪುರ ಜಲಾಶಯದಿಂದ ಮುಂಜಾಗ್ರತೆಯಾಗಿ ನೀರು ಬಿಡಿಸಿ ಕೊಳ್ಳಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಮಾತನಾಡಿ, ಸಿಡಿಲಿಂದ ಸಂಭವಿಸುವ ಸಾವು ತಡೆಯಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ. ಅದರಲ್ಲೂ ಹೆಚ್ಚಾಗಿ ರೈತಾಪಿ ಜನರಿಗೆ ಅರಿವು ಮೂಡಿಸಬೇಕು. ಹೀಟ್ ವೇವ್ ಕುರಿತು ಹೆಚ್ಚು ಪ್ರಚಾರ ಮಾಡಬೇಕು. ಇನ್ನು ತಾಲ್ಲೂಕುವಾರು ಟಾಸ್ಕ್‌ಫೋರ್ಸ್ ಸಮಿತಿ ಕರೆದು ಸಭೆ ನಡಾವಳಿ ಕಳುಹಿಸಿದಲ್ಲಿ ಅನುಮೋದನೆ ನೀಡಲಾಗುವುದು ಎಂದು ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಇಒಗಳಿಗೆ ನಿರ್ದೇಶನ ನೀಡಿದರು.

ಇದಕ್ಕೂ ಮೊದಲು ಜಿಲ್ಲಾಧಿಕಾರಿಗಳು ಸೊನ್ನ ಬ್ಯಾರೇಜ್, ಅಮರ್ಜಾ, ಬೆಣ್ಣೆತೊರಾ, ಚಂದ್ರಂಪಳ್ಳಿ, ಗಂಡೋರಿ ನಾಲಾ, ಕೆಳದಂಡೆ ಮುಲ್ಲಾಮಾರಿ ಜಲಾಶಯಗಳಲ್ಲಿ ಇಂದಿನ ನೀರಿನ ಸ್ಥಿತಿಗತಿ ಮಾಹಿತಿಯನ್ನು ಎಂಜಿನಿಯರ್ ಗಳಿಂದ ಪಡೆದರು.

# ಮಂತ್ರಾಲಯ ರಾಯರ ಮಠದಲ್ಲಿ ಭಕ್ತರ ಕಾಣಿಕೆ ಮಹಾಪೂರ ; 20 ದಿನಗಳಲ್ಲಿ 2.78 ಕೋಟಿ ಸಂಗ್ರಹ

**ಮಂತ್ರಾಲಯ, ಮೇ. 13:** ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಭಕ್ತರ ಕಾಣಿಕೆ ಮಹಾಪೂರವೇ ಹರಿದುಬಂದಿದೆ. ಕಳೆದ ಕೇವಲ 20 ದಿನಗಳ ಅವಧಿಯಲ್ಲಿ ಮಠದ ಹುಂಡಿಗೆ ಬರೋಬ್ಬರಿ 2.78 ಕೋಟಿ ರೂಪಾಯಿ ಸಂಗ್ರಹವಾಗಿದ್ದು, ರಾಯರ ಮೇಲಿರುವ ಭಕ್ತರ ಅಚಲ ವಿಶ್ವಾಸಕ್ಕೆ ಇದು ಸಾಕ್ಷಿಯಾಗಿದೆ.



ಮಂತ್ರಾಲಯ ಮಠದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ 20 ದಿನಗಳ ಕಾಣಿಕೆ ಎಣಿಕೆ ಕಾರ್ಯ ಇತ್ತೀಚೆಗೆ ಪೂರ್ಣಗೊಂಡಿದೆ. ಈ ಅವಧಿಯಲ್ಲಿ ಒಟ್ಟು 2,78,19,526 ರೂಪಾಯಿ ಹಣ ಸಂಗ್ರಹವಾಗಿದ್ದು, ಇದರಲ್ಲಿ 2.69 ಕೋಟಿ ರೂಪಾಯಿ ಕರೆನ್ಸಿ ನೋಟುಗಳ ರೂಪದಲ್ಲಿದ್ದರೆ, ಸುಮಾರು 8.91 ಲಕ್ಷ ರೂಪಾಯಿ ನಾಣ್ಯಗಳ ರೂಪದಲ್ಲಿ ಬಂದಿದೆ. ನಗದು ಮಾತ್ರವಲ್ಲದೆ, ಭಕ್ತರು ರಾಯರಿಗೆ ಚಿನ್ನ ಮತ್ತು ಬೆಳ್ಳಿಯನ್ನೂ ಸಮರ್ಪಿಸಿದ್ದಾರೆ. ಸುಮಾರು 15 ಗ್ರಾಂ ಚಿನ್ನ ಹಾಗೂ 751 ಗ್ರಾಂ ಬೆಳ್ಳಿಯ ವಸ್ತುಗಳು ಹುಂಡಿಯಲ್ಲಿ ಲಭ್ಯವಾಗಿವೆ.

ಮಠದ ಆವರಣದಲ್ಲಿ ಮಂಗಳವಾರ ಮಧ್ಯ ರಾತ್ರಿವರೆಗೆ ನಡೆದ ಈ ಹುಂಡಿ ಎಣಿಕೆ ಕಾರ್ಯದಲ್ಲಿ ಮಠದ ನೂರಾರು ಸಿಬ್ಬಂದಿ, ಭಜನಾ ಮಂಡಳಿಯ ಸದಸ್ಯರು ಹಾಗೂ ಕರ ಸೇವಕರು ಭಕ್ತಿಯಿಂದ ಪಾಲ್ಗೊಂಡಿದ್ದರು. ಕಲಿಯುಗದ ಕಾಮಧೇನು ಎಂದೇ ಖ್ಯಾತರಾದ ಗುರು ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯಲು ಪ್ರತಿದಿನ ಸಾವಿರಾರು ಭಕ್ತರು ಮಂತ್ರಾಲಯಕ್ಕೆ ಭೇಟಿ ನೀಡುತ್ತಿದ್ದು, ವಿಶೇಷವಾಗಿ ರಜೆ ದಿನಗಳಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತಿದೆ. ಸದ್ಯ ಈ ಭಾರಿ ಮೊತ್ತದ ಕಾಣಿಕೆ ಸಂಗ್ರಹವಾಗಿರುವುದು ಮಂತ್ರಾಲಯದ ಭಕ್ತ ವಲಯದಲ್ಲಿ ಗಮನ ಸೆಳೆದಿದೆ.

# ಮೋದಿ ಸರ್ಕಾರ "ಚೋರ್ ಬಜಾರ್" ನಡೆಸುತ್ತಿದೆ: ರಾಹುಲ್ ಗಾಂಧಿ ಆರೋಪ

### ಹಕ್ಕುಗಳು ಮತ್ತು ಅವಕಾಶಗಳ ಕಳ್ಳತನದ ಆರೋಪಿಸಿದ್ದಾರೆ



**ನವದೆಹಲಿ, ಮೇ 13:** ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ತೀವ್ರ ರಾಜಕೀಯ ದಾಳಿ ನಡೆಸಿದ್ದಾರೆ, ಸರ್ಕಾರವು ಸಮಾಜದ ವಿವಿಧ ವರ್ಗಗಳ ಹಕ್ಕುಗಳು, ಅವಕಾಶಗಳು ಮತ್ತು ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ "ಕದಿಯುತ್ತಿದೆ" ಎಂದು ಆರೋಪಿಸಿದ್ದಾರೆ ಮತ್ತು ದೇಶವನ್ನು ಸರ್ಕಾರವಲ್ಲದೆ "ಚೋರ್ ಬಜಾರ್" ನಂತೆ ನಡೆಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ತಮ್ಮ ವಾಟ್ಸಾಪ್ ಚಾನೆಲ್ನಲ್ಲಿ ಹಂಚಿಕೊಂಡಿರುವ ಬಲವಾದ ಪದಗಳ ಪೋಸ್ಟ್‌ನಲ್ಲಿ, ಗಾಂಧಿ "ನರೇಂದ್ರ ಮೋದಿ ಸರ್ಕಾರ್ ನಹಿ, ಚೋರ್ ಬಜಾರ್ ಚಲಾ ರಹೇ ಹೈ!" ಎಂಬ ಘೋಷಣೆಯನ್ನು ಹೊಂದಿರುವ ಗ್ರಾಫಿಕ್ ಅನ್ನು ಪೋಸ್ಟ್ ಮಾಡಿದ್ದಾರೆ. (ನರೇಂದ್ರ ಮೋದಿ ಸರ್ಕಾರ ನಡೆಸುತ್ತಿಲ್ಲ, ಆದರೆ ಕಳ್ಳರ ಮಾರುಕಟ್ಟೆ ಸರ್ಕಾರವನ್ನು ನಡೆಸುತ್ತಿದೆ. ಈ ಪೋಸ್ಟ್‌ನಲ್ಲಿ ಬಿಜೆಪಿ ಸರ್ಕಾರದ ಅಡಿಯಲ್ಲಿ ನಡೆದ "ಕಳ್ಳತನ"ಗಳ ಸರಣಿಯನ್ನು ಪಟ್ಟಿ ಮಾಡಲಾಗಿದೆ. ಅದರಲ್ಲಿ "ಚುನಾವಣೆಗಳಲ್ಲಿ ಮತ ಕಳ್ಳತನ," "ಪರೀಕ್ಷೆಗಳಲ್ಲಿ ಪತ್ರಿಕೆ ಸೋರಿಕೆ," "ಬುಡಕಟ್ಟು ಜನರಿಂದ ಅರಣ್ಯ ಕಳ್ಳತನ," "ರೈತರಿಂದ ಒಬಿಸಿ ಕಳ್ಳತನ," "ಬಡವರಿಂದ ಭೂ ಕಳ್ಳತನ," "ಔಃಅ ಪಾಲನ್ನು ಕಸಿದುಕೊಳ್ಳುವುದು," ಮತ್ತು "ಅಮೆರಿಕಾ ಒಪ್ಪಂದದಲ್ಲಿ ದತ್ತಾಂಶ ಕಳ್ಳತನ" ಸೇರಿವೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ಪೋಸ್ಟ್‌ನಲ್ಲಿ "ಈಸ್ ಖುಲೇಮ್ ಹೋ ರಹಿ ಚೋರಿ ಸೆ ದೇಶ್ ಕೋ ಬಚಾನೇ ಕಿ ಜಿಮ್ಮೆದಾರಿ ದೇಶ್ ಕೆ ಯುವಾವೋಂ ಕಿ ಹೈ ಔರ್ ಮೈ ಉಂಕೆ ಸಾಥ್ ಖಡಾ ಹೂಂ" ಎಂದು ಹೇಳಿದ್ದಾರೆ. ಭಾರತವನ್ನು ಬಹಿರಂಗ ಲೂಟಿ ಎಂದು ಅವರು ವಿವರಿಸಿದ್ದರಿಂದ ಭಾರತವನ್ನು ರಕ್ಷಿಸುವುದು ದೇಶದ ಯುವಕರ ಜವಾಬ್ದಾರಿಯಾಗಿದೆ ಮತ್ತು ಅವರು ಅವರೊಂದಿಗೆ ದೃಢವಾಗಿ ನಿಂತಿದ್ದಾರೆ ಎಂದು ಪ್ರತಿಪಾದಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳು ಮತ್ತು ನಿರುದ್ಯೋಗದಿಂದ ಹಿಡಿದು ಜಾತಿ ಜನಗಣತಿ, ಮೀಸಲಾತಿ ನೀತಿಗಳು ಮತ್ತು ಅದಾನಿ ವಿವಾದದವರೆಗೆ ಬಿಜೆಪಿ ನೇತೃತ್ವದ ಕೇಂದ್ರದ ವಿರುದ್ಧ ಕಾಂಗ್ರೆಸ್ ನಡೆಸುತ್ತಿರುವ ಆಕ್ರಮಣಕಾರಿ ಅಭಿಯಾನದ ಮಧ್ಯೆ ಈ ದಾಳಿ ನಡೆದಿದೆ. ಗಾಂಧಿಯವರು ಸರ್ಕಾರವನ್ನು ಪದೇ ಪದೇ ಆರೋಪಿಸಿದ್ದಾರೆ. ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಸಾಂವಿಧಾನಿಕ ರಕ್ಷಣೆಗಳನ್ನು ದುರ್ಬಲಗೊಳಿಸುತ್ತಾ ಆಯ್ದ ಕಾರ್ಪೊರೇಟ್ ಹಿತಾಸಕ್ತಿಗಳನ್ನು ಬೆಂಬಲಿಸುವುದು.

# ವಿಶ್ವಾಸಮತ ಗೆದ್ದ ವಿಜಯ್; ಸರ್ಕಾರಕ್ಕೆ 144 ಶಾಸಕರ ಬೆಂಬಲ





ಚೆನ್ನೈ, ಮೇ 13: ವಿಶ್ವಾಸಮತ ಯಾಚನೆ ಪರೀಕ್ಷೆಯಲ್ಲಿ ಟಿವಿಕೆ ಮುಖ್ಯಸ್ಥ ವಿಜಯ್ ಪಾಸ್ ಆಗಿದ್ದಾರೆ. ಸರ್ಕಾರಕ್ಕೆ 144 ಮಂದಿ ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಟಿವಿಕೆ, ಕಾಂಗ್ರೆಸ್, ಸಿಪಿಎಂ, ಸಿಪಿಐ, ಮುಸ್ಲಿಮ್ ಲೀಗ್, ವಿಸಿಕೆ ಜೊತೆ ಎಐಎಡಿಎಂಕೆಯ ಬಂಡಾಯ ಎದ್ದಿರುವ 27 ಶಾಸಕರು ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ.

ಬಹುಮತ ಸಾಬೀತು ಪಡಿಸುವ ವೇಳೆ ಡಿಎಂಕೆ ಮತ್ತು ಪಿಎಂಕೆ ಶಾಸಕರು ಸಭಾತ್ಯಾಗ ಮಾಡಿದರು. ಒಬ್ಬ ಬಿಜೆಪಿ ಶಾಸಕರು ಮತದಾನದಿಂದ ದೂರ ಉಳಿದರು. ಅದರೆ ಸದನದಲ್ಲಿದ್ದ 22 ಎಐಎಡಿಎಂಕೆ ಶಾಸಕರು ವಿಶ್ವಾಸಮತದ ವಿರುದ್ಧ ಮತ ಹಾಕಿದರು.

234 ಶಾಸಕರನ್ನು ಹೊಂದಿರುವ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಶಾಸಕರ ಅಗತ್ಯವಿದೆ. ವಿಜಯ್ ತಿರುಚಿ ಪಶ್ಚಿಮ ಮತ್ತು ಪೆರಂಬೂರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ ಹಿನ್ನೆಲೆ ಅದನ್ನು ಒಂದು ಎಂದು ಪರಿಗಣಿಸಲಾಗುತ್ತದೆ.

ಇದರ ಜೊತೆಗೆ ತಿರುಪತ್ತೂರು ಟಿವಿಕೆ ಶಾಸಕ ಶ್ರೀನಿವಾಸ್ ಸೇತುಪತಿ ಅವರಿಗೆ ಬಹುಮತ ಸಾಬೀತು ಪ್ರಕ್ರಿಯೆಯಲ್ಲಿ ಭಾಗಿಯಾಗದಂತೆ ಮದ್ರಾಸ್ ಹೈಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆ ವಿಧಾನಸಭೆಯ ಬಲ 232ಕ್ಕೆ ಇಳಿದಿದ್ದು, ಬಹುಮತಕ್ಕೆ 116 ಶಾಸಕರ ಬೆಂಬಲ ಅಗತ್ಯವಿತ್ತು.

**ಸರ್ಕಾರದ ಪರ ಮತ ಎಷ್ಟು?**

| | |
|---|---|
| ಟಿವಿಕೆ | 106 |
| ಕಾಂಗ್ರೆಸ್ | 05 |
| ಎಡಪಕ್ಷಗಳು | 04 |
| ವಿಸಿಕೆ | 02 |
| ಮುಸ್ಲಿಂ ಲೀಗ್ | 02 |
| ಎಐಎಡಿಎಂಕೆ | 27 |

### ವಿರೋಧದ ಬಳಿಕ ಜ್ಯೋತಿಷಿ ನೇಮಕಾತಿ ರದ್ದುಗೊಳಿಸಿದ ವಿಜಯ್

ತಮಿಳುನಾಡು ಮುಖ್ಯಮಂತ್ರಿ ಕಚೇರಿಯಲ್ಲಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ತಮ್ಮ ಆಪ್ತ ಜ್ಯೋತಿಷಿಯನ್ನು ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಕ ಮಾಡಿದ್ದ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು, ತೀವ್ರ ವಿರೋಧದ ಬೆನ್ನಲ್ಲೇ ಆ ನೇಮಕಾತಿ ಆದೇಶವನ್ನು ರದ್ದುಗೊಳಿಸಿದ್ದಾರೆ. ತಮ್ಮ ರಾಜಕೀಯ ಏಳಿಗೆಯ ಬಗ್ಗೆ ಮುಂಚಿತವಾಗಿಯೇ ನಿಖರ ಭವಿಷ್ಯ ನುಡಿದಿದ್ದ ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ಮೇ 12ರಂದು ಸಿಎಂ ಕಚೇರಿಯ ರಾಜಕೀಯ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಿ ಅಧಿಕೃತ ಆದೇಶ ಹೊರಡಿಸಿದ್ದರು. ಆದರೆ, ಈ ನಿರ್ಧಾರವು ಮಿತ್ರಪಕ್ಷಗಳು ಹಾಗೂ ಪ್ರಗತಿಪರ ವಲಯದಿಂದ ತೀವ್ರ ಟೀಕೆಗೆ ಗುರಿಯಾದ ಹಿನ್ನೆಲೆಯಲ್ಲಿ ಸರ್ಕಾರ ಈಗ ಈ ಕ್ರಮದಿಂದ ಹಿಂದೆ ಸರಿದಿದೆ.

ಸರ್ಕಾರದ ಅಧಿಕೃತ ವ್ಯವಸ್ಥೆಯೊಳಗೆ ಜ್ಯೋತಿಷಿಯೊಬ್ಬರಿಗೆ ಸ್ಥಾನ ನೀಡಿದ್ದು ಭಾರೀ ವಿವಾದ ಸೃಷ್ಟಿಸಿತ್ತು. ಸರ್ಕಾರವು ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕು. ಅದನ್ನು ಬಿಟ್ಟು, ಸಾರ್ವಜನಿಕರ ತೆರಿಗೆ ಹಣದಲ್ಲಿ ಜ್ಯೋತಿಷಿಯೊಬ್ಬರಿಗೆ ಉನ್ನತ ಹುದ್ದೆ ನೀಡುವುದು ಒಪ್ಪತಕ್ಕದ್ದಲ್ಲ. ಇದು ಆಡಳಿತ ವ್ಯವಸ್ಥೆಗೆ ಸ್ವೀಕಾರಾರ್ಹವಲ್ಲ ಎಂದು ಸರ್ಕಾರದ ಮಿತ್ರಪಕ್ಷಗಳಾದ ಕಾಂಗ್ರೆಸ್, ಸಿಪಿಎಂ ಮತ್ತು ವಿಸಿಕೆ ನಾಯಕರು ಕಟುವಾಗಿ ಟೀಕಿಸಿದ್ದರು. ಆಡಳಿತದಲ್ಲಿ ಮೂಢನಂಬಿಕೆಗಳಿಗೆ ಮಣೆಹಾಕಲಾಗುತ್ತಿದೆ ಎಂಬ ಅಸಮಾಧಾನ ಸ್ಫೋಟಗೊಂಡಿತ್ತು. ಮಿತ್ರಪಕ್ಷಗಳ ಈ ರಾಜಕೀಯ ಒತ್ತಡ ಹಾಗೂ ಸಾರ್ವಜನಿಕ ವಲಯದ ಆಕ್ರೋಶಕ್ಕೆ ಮಣಿದಿರುವ ಸಿಎಂ ವಿಜಯ್, ವಿವಾದವನ್ನು ಶಮನಗೊಳಿಸುವ ಉದ್ದೇಶದಿಂದ ನೇಮಕಾತಿಯನ್ನು ರದ್ದುಪಡಿಸಿದ್ದಾರೆ.

# ಮತದಾರರ ಪಟ್ಟಿಯಿಂದ ಹೊರಬಿದ್ದ 1.5 ಕೋಟಿ ಮಂದಿ ಬದುಕು ಅತಂತ್ರ

### ಯಾವುದೇ ಸರ್ಕಾರಿ ಯೋಜನೆಗಳ ಲಾಭ ಸಿಗಲ್ಲ

### ಬಿಹಾರ, ಪಶ್ಚಿಮಬಂಗಾಳ ಸರ್ಕಾರಗಳ ನಿರ್ಧಾರ ಲಕ್ಷಾಂತರ ಜನರ ದೈನಂದಿನ ಬದುಕಿನ ಮೇಲೆ ಪರಿಣಾಮ

ನವದೆಹಲಿ, ಮೇ 13: ಬಿಹಾರ ಹಾಗೂ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ನೆಪದಲ್ಲಿ ಲಕ್ಷಾಂತರ ಜನರ ರೇಷನ್ ಕಾರ್ಡ್ ಹಾಗೂ ಬ್ಯಾಂಕ್ ಸೌಲಭ್ಯಗಳನ್ನು ಕಸಿದುಕೊಳ್ಳುವ ಈ ಪ್ರಕ್ರಿಯೆಯು ಮುಂದಿನ ದಿನಗಳಲ್ಲಿ ಇನ್ನಷ್ಟು ರಾಜಕೀಯ ಸಂಘರ್ಷ ಮತ್ತು ಸಾಮಾಜಿಕ ತಲ್ಲಣಗಳಿಗೆ ಕಾರಣವಾಗುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ

ಎಸ್‌ಐಆರ್‌ನಿಂದ ಮತದಾರರ ಪಟ್ಟಿಯಿಂದ ಕೈಬಿಡಲಾದ ನಾಗರಿಕರಿಗೆ ಇನ್ನು ಮುಂದೆ ಯಾವುದೇ ಸರ್ಕಾರಿ ಯೋಜನೆಗಳ ಲಾಭ ದೊರೆಯುವುದಿಲ್ಲ ಎಂಬ ಮಹತ್ವದ ಹಾಗೂ ಕಠಿಣ ನಿರ್ಧಾರವನ್ನು ಬಿಹಾರ ಮತ್ತು ಪಶ್ಚಿಮ ಬಂಗಾಳದ ಬಿಜೆಪಿ ಸರ್ಕಾರಗಳು ತೆಗೆದುಕೊಂಡಿವೆ.

ಈ ಆಡಳಿತಾತ್ಮಕ ತೀರ್ಮಾನವು ಎರಡೂ ರಾಜ್ಯಗಳಲ್ಲಿನ ಲಕ್ಷಾಂತರ ಜನರ ದೈನಂದಿನ ಬದುಕಿನ ಮೇಲೆ ತೀವ್ರ ಸ್ವರೂಪದ ಪರಿಣಾಮ ಬೀರಲಿದ್ದು, ಆತಂಕದ ವಾತಾವರಣ ನಿರ್ಮಾಣವಾಗಿದೆ.

ಈ ಹೊಸ ನಿಯಮದ ಅನ್ವಯ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರ ಮೂಲಭೂತ ದಾಖಲೆಗಳ ಮಾನ್ಯತೆಯೇ ರದ್ದಾಗುವ ಭೀತಿ ಎದುರಾಗಿದೆ. ಪ್ರಮುಖವಾಗಿ, ಪಟ್ಟಿಯಿಂದ ಹೊರಗುಳಿದ ಇಂತಹ ವ್ಯಕ್ತಿಗಳ ಬ್ಯಾಂಕ್ ಪಾಸ್ ಬುಕ್‌ಗಳು ಹಾಗೂ ಪಡಿತರ ಚೀಟಿ (ರೇಷನ್‌ಕಾರ್ಡ್) ಗಳು ಸಂಪೂರ್ಣವಾಗಿ ರದ್ದಾಗಲಿವೆ. ಇದರಿಂದಾಗಿ ನಾಗರಿಕರ ದೈನಂದಿನ ಆರ್ಥಿಕ ವಹಿವಾಟು ಮತ್ತು ಬಡವರ ಆಹಾರ ಭದ್ರತೆಗೆ ದೊಡ್ಡ ಪೆಟ್ಟು ಬೀಳಲಿದೆ.

ಬಿಹಾರ ರಾಜ್ಯದಲ್ಲಿ ಈ ಪರಿಷ್ಕರಣೆ ಪ್ರಕ್ರಿಯೆಯಡಿ ಭಾರೀ ಸಂಖ್ಯೆಯ ಜನರನ್ನು ಪಟ್ಟಿಯಿಂದ ಹೊರಗಿಡಲಾಗಿದೆ. ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರ, ಬಿಹಾರದಲ್ಲಿ ಒಟ್ಟು 68 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ನಿರ್ದಾಕ್ಷಿಣ್ಯವಾಗಿ ಕೈಬಿಡಲಾಗಿದೆ.

ಈ ಬೃಹತ್ ಪ್ರಮಾಣದ ಕಡಿತವು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಜನಸಾಮಾನ್ಯರು ಆತಂಕಕ್ಕೆ ಸಿಲುಕಿದ್ದಾರೆ.

ಇತ್ತ ಪಶ್ಚಿಮ ಬಂಗಾಳದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ, ಬದಲಿಗೆ ಬಿಹಾರಕ್ಕಿಂತಲೂ ಮತ್ತಷ್ಟು ಗಂಭೀರವಾಗಿದೆ.

ಬಂಗಾಳದಲ್ಲಿ ಬರೋಬ್ಬರಿ 91 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಸೂಕ್ತ ದಾಖಲೆಗಳ ಕೊರತೆ ಅಥವಾ ಇತರ ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಈ ಕಠಿಣ ಕ್ರಮ ಕೈಗೊಳ್ಳಲಾಗಿದ್ದು, ಲಕ್ಷಾಂತರ ಕುಟುಂಬಗಳ ಭವಿಷ್ಯ ಡೋಲಾಯಮಾನವಾಗಿದೆ.

ಆದಾಗ್ಯೂ, ಪಶ್ಚಿಮ ಬಂಗಾಳದಲ್ಲಿ ಪಟ್ಟಿಯಿಂದ ಕೈಬಿಡಲಾದವರ ಪೈಕಿ ಹಲವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಾನೂನು ಹೋರಾಟದ ಮೊರೆ ಹೋಗಿದ್ದಾರೆ. ಲಭ್ಯವಿರುವ ಮಾಹಿತಿಯಂತೆ, ಪಟ್ಟಿಯಿಂದ ಕೈಬಿಡಲಾದವರ ಪೈಕಿ ಒಟ್ಟು 34 ಲಕ್ಷ ಮತದಾರರು ಮೇಲ್ಮನವಿ ಸಲ್ಲಿಸಿದ್ದು, ಈ ಎಲ್ಲ ಪ್ರಕರಣಗಳು ಪ್ರಸ್ತುತ 'ಎಸ್‌ಐಆರ್'

ನ್ಯಾಯಾಧಿಕರಣಗಳ ಮುಂದೆ ವಿಚಾರಣೆಯ ಹಂತದಲ್ಲಿವೆ.

ಈ ನಡುವೆ, ನ್ಯಾಯಾಧಿಕರಣದ ಮೆಟ್ಟಿಲೇರಿರುವ ಜನರಿಗೆ ಸರ್ಕಾರವು ಸಣ್ಣದೊಂದು ತಾತ್ಕಾಲಿಕ ಪರಿಹಾರ ನೀಡಿದೆ. ಯಾರು ತಮ್ಮ ಹೆಸರು ಕೈಬಿಟ್ಟಿರುವುದರ ವಿರುದ್ಧ ಅಧಿಕೃತವಾಗಿ ಮೇಲ್ಮನವಿ ಸಲ್ಲಿಸಿದ್ದಾರೋ, ಅಂತಹ ನಾಗರಿಕರಿಗೆ ಸದ್ಯಕ್ಕೆ ಸರ್ಕಾರಿ ಯೋಜನೆಗಳ ಲಾಭ ಯಥಾವತ್ತಾಗಿ ಮುಂದುವರೆಯಲಿದೆ. ಮೇಲ್ಮನವಿ ಇತ್ಯರ್ಥವಾಗುವವರೆಗೆ ಇವರ ಸೌಲಭ್ಯಗಳಿಗೆ ಯಾವುದೇ ಕಡಿತ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳ ಈ ದಿಢೀರ್ ನಿರ್ಧಾರವು ಬಡ ಹಾಗೂ ಮಧ್ಯಮ ವರ್ಗದ ಜನರಲ್ಲಿ ಭೀತಿ ಹುಟ್ಟಿಸಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ನೆಪದಲ್ಲಿ ಲಕ್ಷಾಂತರ ಜನರ ರೇಷನ್ ಕಾರ್ಡ್ ಹಾಗೂ ಬ್ಯಾಂಕ್ ಸೌಲಭ್ಯಗಳನ್ನು ಕಸಿದುಕೊಳ್ಳುವ ಈ ಪ್ರಕ್ರಿಯೆಯು ಮುಂದಿನ ದಿನಗಳಲ್ಲಿ ಇನ್ನಷ್ಟು ರಾಜಕೀಯ ಸಂಘರ್ಷ ಮತ್ತು ಸಾಮಾಜಿಕ ತಲ್ಲಣಗಳಿಗೆ ಕಾರಣವಾಗುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ.

# ಸಾರ್ವಜನಿಕ ಸಾರಿಗೆಯಲ್ಲಿ ಟ್ರ್ಯಾಕಿಂಗ್ ಅಳವಡಿಕೆ ಕಡ್ಡಾಯ

### ಎಲ್ಲ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂಕೋರ್ಟ್ ಸೂಚನೆ

### ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕ್ರಮ



**ನವದೆಹಲಿ, ಮೇ 13:** ದೇಶಾದ್ಯಂತ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಪ್ರಯಾಣಿಸುವ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ಬುಧವಾರ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಟ್ಟುನಿಟ್ಟಿನ ಮತ್ತು ಟ್ರ್ಯಾಕಿಂಗ್ ಅಳವಡಿಸುವುದನ್ನು ಕಡ್ಡಾಯಗೊಳಿಸಿದೆ.

ಸರ್ಕಾರಿ ಮತ್ತು ಖಾಸಗಿ ಬಸ್‌ಗಳು, ಟ್ಯಾಕ್ಸಿಗಳು ಹಾಗೂ ಕ್ಯಾಬ್‌ಗಳಲ್ಲಿ ತುರ್ತು ಸಂದರ್ಭದಲ್ಲಿ ಬಳಸಲು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಬೇಕು. ಇದರೊಂದಿಗೆ ವಾಹನದ ಚಲನವಲನ ತಿಳಿಯಲು ಜಿಪಿಎಸ್ (ಆಧಾರಿತ ಟ್ರ್ಯಾಕಿಂಗ್ ವ್ಯವಸ್ಥೆ ಇರಲೇಬೇಕು. ಪ್ರತಿಯೊಂದು ರಾಜ್ಯವು ವಾಹನಗಳಿಂದ ಬರುವ ತುರ್ತು ಸಂಕೇತಗಳನ್ನು ಸ್ವೀಕರಿಸಲು ಮತ್ತು ತಕ್ಷಣವೇ ಸ್ಪಂದಿಸಲು ಕೇಂದ್ರೀಕೃತ 'ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್'ಗಳನ್ನು ಸ್ಥಾಪಿಸಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಈ ತಂತ್ರಜ್ಞಾನಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ನೀಡಿರುವ 'ನಿರ್ಭಯಾ ನಿಧಿ'ಯನ್ನು ಸಮರ್ಪಕವಾಗಿ ಬಳಸಿಕೊಳ್ಳದ ರಾಜ್ಯಗಳ ವಿರುದ್ಧ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸುರಕ್ಷತಾ ಸಾಧನಗಳನ್ನು ಹೊಂದಿರದ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಅಥವಾ ಪರ್ಮಿಟ್ ನವೀಕರಣ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಪೀಠವು ಸ್ಪಷ್ಟಪಡಿಸಿದೆ.

# ಕಿಂಗ್ ಕೊಹ್ಲಿ ಶತಕ; ಕೆಕೆಆರ್ ವಿರುದ್ಧ ಗೆದ್ದ ಆರ್‌ಸಿಬಿಗೆ ಅಗ್ರಸ್ಥಾನ



ರಾಯಪುರ, ಮೇ 13 : ಇಲ್ಲಿನ ಶಹೀದ್ ವೀರ್ ನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ 57ನೇ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಈ ಆವೃತ್ತಿಯಲ್ಲಿ 8ನೇ ಗೆಲುವು ದಾಖಲಿಸುವ ಮೂಲಕ ಅಂಕಪಟ್ಟಿಯಲ್ಲಿ ಮತ್ತೊಮ್ಮೆ ಅಗ್ರಸ್ಥಾನಕ್ಕೇರಿದೆ.

ಇತ್ತ ಆರ್‌ಸಿಬಿ ವಿರುದ್ಧ ಸೋತ ಕೆಕೆಆರ್ ಮೂರನೇ ತಂಡವಾಗಿ ಪ್ಲೇಆಫ್‌ನಿಂದ ಹೊರಬಿದ್ದಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 192 ರನ್ ಕಲೆಹಾಕಿತು. ಈ ಗುರಿ ಬೆನ್ನು ಹತ್ತಿದ ದ ಆರ್?ಸಿಬಿ ಚೇಸ್ ಮಾಸ್ಟರ್ ವಿರಾಟ್ ಕೊಹ್ಲಿಯ ಅಬ್ಬರದ ಶತಕದ ನೆರವಿನಿಂದ ಸುಲಭವಾಗಿ ಜಯದ ನಗೆ ಬೀರಿತು. ಕಳೆದ 2 ಪಂದ್ಯಗಳಲ್ಲಿ ಸೊನ್ನೆಗೆ ಔಟಾಗಿದ್ದ ಕೊಹ್ಲಿ ಈ ಪಂದ್ಯದಲ್ಲಿ ಸ್ಮರಣೀಯ ಇನ್ನಿಂಗ್ಸ್ ಆಡಿ ಆರ್?ಸಿಬಿ ಗೆಲುವಿನ ರೂವಾರಿ ಎನಿಸಿಕೊಂಡರು.

**ರಘುವಂಶಿ– ರಿಂಕು ಜೊತೆಯಾಟ**

ಮಳೆ ಪೀಡಿತ ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿದ ಕೋಲ್ಕತ್ತಾ ತಂಡಕ್ಕೆ ಆರಂಭದಲ್ಲೇ ಆಘಾತ ಕಾದಿತ್ತು. ಓಪನರ್ ಫಿನ್ ಅಲೆನ್ (18) ಅವರನ್ನು ಭುವನೇಶ್ವರ್ ಕುಮಾರ್ ಬೇಗನೆ ಪೆವಿಲಿಯನ್‌ಗೆ ಕಳುಹಿಸಿದರು. ನಂತರ ನಾಯಕ ಅಜಿಂಕ್ಯ ರಹಾನೆ (19) ಕೂಡ ಕಡಿಮೆ ಸ್ಕೋರ್‌ಗೆ ಔಟಾದರು. ಆದಾಗ್ಯೂ, ಈ ಹಂತದಲ್ಲಿ ಅಂಗ್‌ಕ್ರಿಶ್ ರಘುವಂಶಿ ಇನ್ನಿಂಗ್ಸ್ ನಿಭಾಯಿಸುವ ಕೆಲಸ ಮಾಡಿದರು. ಅವರೊಂದಿಗೆ, ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ (32) ಅತ್ಯುತ್ತಮ ಪ್ರದರ್ಶನ ನೀಡಿದರು. ಕೊನೆಯಲ್ಲಿ, ರಿಂಕು ಸಿಂಗ್ (49*) ತಮ್ಮದೇ ಆದ ಶೈಲಿಯಲ್ಲಿ ಸಿಕ್ಸರ್‌ಗಳೊಂದಿಗೆ ತಂಡಕ್ಕೆ ಬೃಹತ್ ಸ್ಕೋರ್ ಒದಗಿಸಿದರು. ದುರದೃಷ್ಟವಶಾತ್, ರಿಂಕು ತಮ್ಮ ಅರ್ಧಶತಕವನ್ನು ತಪ್ಪಿಸಿಕೊಂಡರು.

ಇತ್ತ ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ ಭಿಗಿ ಬೌಲಿಂಗ್ ಮಾಡಿ ಪ್ರಮುಖ ವಿಕೆಟ್ ಪಡೆದರು. ಜೋಶ್ ಹ್ಯಾಜಲ್‌ವುಡ್ ಕೂಡ ರಹಾನೆ ಅವರನ್ನು ಔಟ್ ಮಾಡುವ ಮೂಲಕ ಅದ್ಭುತ ಪ್ರದರ್ಶನ ನೀಡಿದರು. ರಸಿಕ್ ಸಲಾಂ ದಾರ್ ಕೂಡ ಒಂದು ವಿಕೆಟ್ ಪಡೆದರೂ, ಆರ್‌ಸಿಬಿ ಬೌಲರ್‌ಗಳು ಡೆತ್ ಓವರ್‌ಗಳಲ್ಲಿ ಕೋಲ್ಕತ್ತಾ ಬ್ಯಾಟ್ಸ್‌ಮನ್‌ಗಳನ್ನು ತಡೆಯಲು ಹೆಣಗಾಡಿದರು. ವಿಶೇಷವಾಗಿ ಕೊನೆಯ 5 ಓವರ್‌ಗಳಲ್ಲಿ, ಕೆಕೆಆರ್ ಬ್ಯಾಟ್ಸ್‌ಮನ್‌ಗಳು ರನ್‌ಗಳ ಪ್ರವಾಹವನ್ನು ಸುರಿಸಿ 190 ರನ್?ಗಳ ಗಡಿ ದಾಟಿಸಿದರು.

**ಕೊಹ್ಲಿ– ಪಡಿಕ್ಕಲ್ ಶತಕದ ಜೊತೆಯಾಟ**

ಈ ಗುರಿ ಬೆನ್ನಟ್ಟಿದ ಆರ್?ಸಿಬಿಗೂ ಸಾಧಾರಣ ಆರಂಭ ಸಿಕ್ಕಿತು. ಕಳಪೆ ಫಾರ್ಮ್?ನಿಂದ ಬಳಲುತ್ತಿರುವ ಆರಂಭಿಕ ಜಾಕೋಬ್ ಬೆಥೆಲ್ ಕೇವಲ 15 ರನ್‌ಗಳಿಗೆ ಔಟಾದರು. ಆದರೆ ಆ ಬಳಿಕ ಜೊತೆಯಾದ ಕೊಹ್ಲಿ ಹಾಗೂ ದೇವದತ್ ಪಡಿಕ್ಕಲ್ ಶತಕದ ಜೊತೆಯಾಟವನ್ನಾಡುವ ಮೂಲಕ ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಇದೇ ಹಂತದಲ್ಲಿ ಕೊಹ್ಲಿ 32 ಎಸೆತಗಳಲ್ಲಿ ಅರ್ಧಶತಕವನ್ನು ಪೂರೈಸಿದರು. ಆದರೆ 39 ರನ್‌ಗಳಿಗೆ ದೇವದತ್ ಪಡಿಕ್ಕಲ್ ಔಟಾಗುವ ಮೂಲಕ ಈ ಜೊತೆಯಾಟ ಮುರಿದುಬಿತ್ತು.

**ಅಜೇಯ ಶತಕ ಬಾರಿಸಿದ ಕೊಹ್ಲಿ**

ಆ ನಂತರ ಬಂದ ನಾಯಕ ರಜತ್ ಪಾಟಿದರ್ 11 ರನ್?ಗಳಿಗೆ ಔಟಾದರೆ, ಟಿಮ್ ಡೇವಿಡ್ ಇನ್ನಿಂಗ್ಸ್ 2 ರನ್‌ಗಳಿಗೆ ಅಂತ್ಯವಾಯಿತು. ಇತ್ತ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವ ಕೆಲಸ ಮಾಡಿದ ವಿರಾಟ್ ಕೊಹ್ಲಿ 58 ಎಸೆತಗಳಲ್ಲಿ ಶತಕ ಪೂರೈಸಿದರು. ಇದು ಈ ಆವೃತ್ತಿಯಲ್ಲಿ ಕೊಹ್ಲಿಯ ಮೊದಲ ಶತಕವಾದರೆ, ಐಪಿಎಲ್ ವೃತ್ತಿಜೀವನದ 9ನೇ ಶತಕವಾಗಿತ್ತು. ಈ ಶತಕದ ಇನ್ನಿಂಗ್ಸ್ ಮೂಲಕ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 14000 ರನ್‌ಗಳ ಗಡಿ ಕೂಡ ದಾಟಿದರು. ಈ ಪಂದ್ಯದಲ್ಲಿ ಅಜೇಯರಾಗಿ ಉಳಿದ ಕೊಹ್ಲಿ 60 ಎಸೆತಗಳಲ್ಲಿ 105 ರನ್ ಬಾರಿಸಿದರು.

# ವಾಷಿಂಗ್ಟನ್ 5 ಷರತ್ತು ಪೂರೈಸಿದರೆ ಅಮೆರಿಕದೊಂದಿಗೆ ಮಾತುಕತೆ: ಇರಾನ್ ಸ್ಪಷ್ಟನೆ

**ಟೆಹ್ರಾನ್, ಮೇ 13:** ವಾಷಿಂಗ್ಟನ್ ಐದು ಷರತ್ತುಗಳನ್ನು ಪೂರೈಸಿದರೆ ಇರಾನ್ ಅಮೆರಿಕದೊಂದಿಗೆ ಮಾತುಕತೆ ನಡೆಸಲಿದೆ ಎಂದು ಫಾರ್ಸ್ ಸುದ್ದಿ ಸಂಸ್ಥೆ ಮೂಲವನ್ನು ಉಲ್ಲೇಖಿಸಿ ವರದಿ ಮಾಡಿದೆ. ಎಲ್ಲಾ ರಂಗಗಳಲ್ಲಿ, ವಿಶೇಷವಾಗಿ ಲೆಬನಾನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವುದು, ಇರಾನ್ ವಿರುದ್ಧದ ನಿರ್ಬಂಧಗಳನ್ನು ತೆಗೆದುಹಾಕುವುದು, ಇರಾನಿನ ಸ್ವತ್ತುಗಳನ್ನು ನಿರ್ಬಂಧಿಸುವುದು, ಹಾನಿಗಳಿಗೆ ಪರಿಹಾರ ನೀಡುವುದು ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್‌ನ ಸಾರ್ವಭೌಮತ್ವವನ್ನು ಗುರುತಿಸುವುದು ಷರತ್ತುಗಳಲ್ಲಿ ಸೇರಿವೆ ಎಂದು ವರದಿ ಮಂಗಳವಾರ ತಿಳಿಸಿದೆ. ನೌಕಾ ದಿಗ್ಬಂಧನವು ಅಮೆರಿಕವನ್ನು ನಂಬಲು ಸಾಧ್ಯವಿಲ್ಲ ಎಂಬ ಇರಾನ್ ಕಡೆಯ ದೃಷ್ಟಿಕೋನವನ್ನು ಬಲಪಡಿಸಿದೆ ಎಂದು ಇರಾನ್ನ ಅಮೆರಿಕ ಜೊತೆಗಿನ ಸಂವಾದದ ಮಧ್ಯವರ್ತಿ ಪಾಕಿಸ್ತಾನಕ್ಕೆ ಟೆಹ್ರಾನ್ ತಿಳಿಸಿದೆ. ಈ ಐದು ಬೇಡಿಕೆಗಳು ಮಾತುಕತೆಗಳನ್ನು ಪುನರಾರಂಭಿಸಲು ಆಧಾರವಾಗಿವೆ ಎಂದು ಇರಾನಿನ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. ಇದಕ್ಕೂ ಮೊದಲು, ಟೆಹ್ರಾನ್ ವಾಷಿಂಗ್ಟನ್ನ ಇತ್ತೀಚಿನ 14 ಅಂಶಗಳ ಶಾಂತಿ ಪ್ರಸ್ತಾಪವನ್ನು ತಿರಸ್ಕರಿಸಿತು, ಇದನ್ನು "ಶರಣಾಗತಿಯ ಬೇಡಿಕೆ" ಎಂದು ವಿವರಿಸಿತು, ವಾಷಿಂಗ್ಟನ್ ಮತ್ತು ಜೆರುಸಲೆಮ್ ಮಿಲಿಟರಿಯಲ್ಲಿ ವಿಫಲವಾದುದನ್ನು ರಾಜತಾಂತ್ರಿಕತೆಯ ಮೂಲಕ ಭದ್ರಪಡಿಸಿಕೊಳ್ಳುವ ಪ್ರಯತ್ನ ಎಂದು ಕರೆದಿದೆ. ಹೆಸರಿಸದ ಮೂಲವನ್ನು ಉಲ್ಲೇಖಿಸಿ, IRGC ಯ ಫಾರ್ಸ್ ನ್ಯೂಸ್ ಟೆಹ್ರಾನ್ ತನ್ನ ಪ್ರಮುಖ ಬೇಡಿಕೆಗಳನ್ನು ಸ್ಥಾಪಿಸಿದರೆ ಮಾತ್ರ ವಾಷಿಂಗ್ಟನ್‌ಗೆ ನೇರವಾಗಿದೆ ಮಾತುಕತೆಗೆ ಮರಳುತ್ತದೆ ಎಂದು ವರದಿ ಮಾಡಿದೆ. ಆದಾಗ್ಯೂ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಚ್ಚಿನ ಪ್ರಮುಖ ಬೇಡಿಕೆಗಳನ್ನು, ವಿಶೇಷವಾಗಿ ಯುದ್ಧ ಪರಿಹಾರದ ಬೇಡಿಕೆಯನ್ನು ಮತ್ತು ಹಾರ್ಮುಜ್ ಮೇಲೆ ಇರಾನಿನ ನಿಯಂತ್ರಣವನ್ನು ಗುರುತಿಸಲು ಸಾರ್ವಜನಿಕವಾಗಿ ತಿರಸ್ಕರಿಸಲಾಗಿದೆ, ಇದನ್ನು ವಾಷಿಂಗ್ಟನ್ "ಸ್ವೀಕಾರಾರ್ಹವಲ್ಲ" ಎಂದು ಕರೆದಿದೆ. ಮೇ 4 ರಂದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದದಂತೆ ನೋಡಿಕೊಳ್ಳುವುದು ವಾಷಿಂಗ್ಟನ್‌ನ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು.

# ರೂಪಾಯಿ ಮೌಲ್ಯ ಕುಸಿತ ನಿಯಂತ್ರಣ ಆದ್ಯತೆಯಾಗಬೇಕು ಪ್ರಧಾನಿ ಆರ್ಥಿಕ ಸಲಹೆಗಾರ



**ನವದೆಹಲಿ, ಮೇ 13:** ಡಾಲರ್ ಎದುರು ರೂಪಾಯಿ ಮೌಲ್ಯವು ನಿರಂತರವಾಗಿ ಕುಸಿಯುತ್ತಿದೆ. ಈ ಕುಸಿತವನ್ನು ತಡೆಯುವುದು 2026–27ರ ಹಣಕಾಸು ವರ್ಷದ ಕೇಂದ್ರೀಯ ಆರ್ಥಿಕ ಆದ್ಯತೆಗಳಲ್ಲಿ ಒಂದಾಗಬೇಕು ಎಂದು ಪ್ರಧಾನಮಂತ್ರಿಗಳ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಎಚ್ಚರಿಕೆ ನೀಡಿದ್ದಾರೆ. ಪ್ರಸ್ತುತ, ಡಾಲರ್ ವಿರುದ್ಧ ರೂಪಾಯಿ ಮೌಲ್ಯವು 95.75ಗಳಷ್ಟಿದ್ದು, ದಾಖಲೆಯ ಕುಸಿತ ಕಂಡಿದೆ. ಏಷ್ಯಾದ ಅತಿ ಕಳಪೆ ಕರೆನ್ಸಿಯಾಗಿ ಗುರುತಿಸಿಕೊಂಡಿದೆ. ಈ ಕುರಿತು, ಮೇ 12ರಂದು ನಡೆದ ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರೀಸ್‌ನ (CII) ವಾರ್ಷಿಕ ಸಮ್ಮೇಳನದಲ್ಲಿ ನಾಗೇಶ್ವರನ್ ಮಾತನಾಡಿದ್ದಾರೆ. ರೂಪಾಯಿಯ ಕುಸಿತಕ್ಕೆ ಕಚ್ಚಾ ತೈಲ ಬೆಲೆಯ ಏರಿಕೆ, ವಿದೇಶಿ ಹೂಡಿಕೆದಾರರ ಹರಿವು ಕುಸಿತ ಹಾಗೂ ಬಲವಾದ ಡಾಲರ್‌ನ ಪ್ರಭಾವಗಳು ಮುಖ್ಯ ಕಾರಣವಾಗಿವೆ ಎಂದಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷವು ತಾತ್ಕಾಲಿಕವಲ್ಲದೆ ರಚನಾತ್ಮಕ ಸಮಸ್ಯೆಯಾಗಿದೆ. ಇದು, ಭಾರತದ ಬ್ಯಾಲೆನ್ಸ್ ಆಫ್ ಪೇಮೆಂಟ್ಸ್‌ಗೆ ನೇರವಾದ ಲೈವ್ ಸ್ಟ್ರೆಸ್ ಟೆಸ್ಟ್ ಆಗಿದೆ. ಇದರಿಂದ ಹಣದುಬ್ಬರ ಮತ್ತು ವಿನಿಮಯ ದರದ ಮೇಲೆ ನೇರ ಪರಿಣಾಮ ಬೀಳುತ್ತದೆ. ಈ ಸನ್ನಿವೇಶದಲ್ಲಿ ಖಾತೆಯ ನಿರ್ವಹಣೆ, ಅದರ ಹಣಕಾಸು ಮತ್ತು ರೂಪಾಯಿಯ ಮುಂದುವರಿದ ಕುಸಿತವನ್ನು ತಡೆಗಟ್ಟುವುದು 2027ರ ಮುಖ್ಯ ಆರ್ಥಿಕ ಆದ್ಯತೆಗಳಾಗಿವೆ ಎಂದು ವಿವರಿಸಿದ್ದಾರೆ.

ಜಾಗತಿಕ ಆರ್ಥಿಕತೆಯಲ್ಲಿ ನಡೆಯುತ್ತಿರುವ ಜಿಯೋಎಕಾನಾಮಿಕ್ ಫ್ರ್ಯಾಗ್ಮೆಂಟೇಷನ್, ತಂತ್ರಜ್ಞಾನ ವಿಭಜನೆ, ಶಕ್ತಿ ಪರಿವರ್ತನೆ ಮತ್ತು ಜಿಯೋಪಾಲಿಟಿಕಲ್ ರೀತಿಯ ರಚನಾತ್ಮಕ ಬದಲಾವಣೆಗಳ ಅಪಾಯಗಳು ಮರಳಿ ಹಿಂದಿರುಗುವುದಿಲ್ಲ ಎಂದು ಅವರು ಒತ್ತಿ ಹೇಳಿದ್ದಾರೆ.

ಭಾರತದ ಮ್ಯಾಕ್ರೋ ಫೌಂಡೇಶನ್‌ಗಳು ಬಲವಾಗಿವೆ. ಆದರೂ, ಅವುಗಳು ಮಾತ್ರ ಸಮಸ್ಯೆಯನ್ನು ಪರಿಹರಿಸಲು ಸಾಕಾಗುವುದಿಲ್ಲ. ತಂತ್ರಾತ್ಮಕ ಸ್ಪಷ್ಟತೆ ಮತ್ತು ನೀತಿ ಹೊಂದಾಣಿಕೆಗಳ ಅಗತ್ಯವಿದೆ ಎಂದಿದ್ದಾರೆ.

ಅವರ ಹೇಳಿಕೆಯು ಪ್ರಸ್ತುತ ಆರ್ಥಿಕ ಸವಾಲುಗಳ ಗಂಭೀರತೆಯನ್ನು ಪ್ರತಿಬಿಂಬಿಸುತ್ತದೆ. ರೂಪಾಯಿ ಕುಸಿತವು ಆಮದುಗಳನ್ನು ದುಬಾರಿಯಾಗಿಸುತ್ತದೆ ಮತ್ತು ಹಣದುಬ್ಬರವನ್ನು ಹೆಚ್ಚಿಸುತ್ತದೆ. ಆದ್ದರಿಂದಲೇ, ನಾಗೇಶ್ವರನ್ ಅವರು ರೂಪಾಯಿ ಮೌಲ್ಯ ಕುಸಿತವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು 2027ರ ಹಣಕಾಸು ವರ್ಷದ ಆದ್ಯತೆಯಾಗಬೇಕು ಎಂದಿದ್ದಾರೆ.

